# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

## 95ನೇ ಸಾಮಾನ್ಯ ಸಿಂಡಿಕೇಟ್ ಸಭೆ ಹಾಗೂ 2025ನೇ ಸಾಲಿನ 6ನೇ ಸಭೆಯ ನಡಾವಳಿಗಳು

**ದಿನಾಂಕ** : ಮಂಗಳವಾರ, 12–08–2025

**ಸಮಯ** : ಪೂರ್ವಾಹ್ನ 11 : 30 ಘಂಟೆ

**ಸ್ಥಳ** : ಸಿಂಡಿಕೇಟ್ ಸಭಾಂಗಣ
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,
ಬೆಳಗಾವಿ.

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **95ನೇ ಸಾಮಾನ್ಯ ಸಿಂಡಿಕೇಟ್** ಹಾಗೂ **2025ನೇ ಸಾಲಿನ 6ನೇ ಸಭೆಯನ್ನು** ದಿನಾಂಕ 12 ಆಗಸ್ಟ್ 2025 ರಂದು ಪೂರ್ವಾಹ್ನ 11.30 ಘಂಟೆಗೆ ಜರುಗಿದ ಸಭೆಗೆ ಹಾಜರಿದ್ದ/ಹಾಜರಿರದ ಸದಸ್ಯರುಗಳ ವಿವರ.

**I. ಹಾಜರಿದ್ದ ಸದಸ್ಯರು**

| | | |
|---|---|---|
| 1. | **ಪ್ರೊ. ಸಿ. ಎಂ. ತ್ಯಾಗರಾಜ** | **ಕುಲಪತಿಗಳು ಹಾಗೂ ಅಧ್ಯಕ್ಷರು** |
| 2. | ಪ್ರೊ. ವಿನಾಯಕ ಬಂಕಾಪೂರ | ಸದಸ್ಯರು |
| 3. | ಶ್ರೀ ವಿನೀತ್ ವ. ಜೋಶಿ | ಸದಸ್ಯರು |
| 4. | ಶ್ರೀ ಈರಣ್ಣ ಬ. ಹಪ್ಪಲಿ | ಸದಸ್ಯರು |
| 5. | ಶ್ರೀ ಆರ್. ಎಂ. ದೇವರಡ್ಡಿ | ಸದಸ್ಯರು |
| 6. | ಶ್ರೀ ಜಗದೀಶ ಜೋಡಂಗಿ | ಸದಸ್ಯರು |
| 7. | ಶ್ರೀ ಎಸ್. ಎ. ದೇಶಮುಖ್ | ಸದಸ್ಯರು |
| 8. | ಶ್ರೀಮತಿ ಎಸ್. ಬಿ.ಢಂಗ | ಸದಸ್ಯರು |
| 9. | ಡಾ. ಕಾವೇರಿ ಎಚ್.ಎಂ. | ಸದಸ್ಯರು |
| 10. | ಶ್ರೀ. ರಫೀ ಭಂಡಾರಿ | ಸದಸ್ಯರು |
| 11. | ಶ್ರೀ. ರವೀಂದ್ರ ಎಂ. ನಾಯ್ಕರ್ | ಸದಸ್ಯರು |
| 12. | ಡಾ. ಮಾರುತಿ ಎಚ್. ಮುಂಡರಗಿ | ಸದಸ್ಯರು |
| 13. | ಶ್ರೀ. ಮಹಾಂತೇಶ ಕಂಬಾರ | ಸದಸ್ಯರು |
| 14. | ಡಾ. ಎಸ್.ಎಸ್. ಅಂಗಡಿ | ಸದಸ್ಯರು |
| 15. | ಪ್ರೊ.(ಶ್ರೀಮತಿ) ವ್ಹಿ ಎಸ್. ಶಿಗೇಹಳ್ಳಿ | ಸದಸ್ಯರು |
| 16. | ಶ್ರೀಮತಿ ಎಂ.ಎ. ಸಪ್ನ, ಕೆ.ಎ.ಎ.ಎಸ್.(ಹಣಕಾಸು ಅಧಿಕಾರಿಗಳು) | ವಿಶೇಷ ಆಹ್ವಾನಿತರು |
| 17. | ಪ್ರೊ. ಡಿ. ಎನ್. ಪಾಟೀಲ್ ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 18. | ಶ್ರೀ. ಸಂತೋಷ ಕಾಮಗೌಡ ಕೆ.ಎ.ಎಸ್. | **ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು** |

**II. ಹಾಜರಾಗದ ಸದಸ್ಯರು:**

| | | |
|---|---|---|
| 1. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ | ಸದಸ್ಯರು |
| 4. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ– 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021) PM-USHA (MERU)


## ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು

**ವಿಷಯ:** ದಿನಾಂಕ 12 ಆಗಸ್ಟ್ 2025 ರಂದು ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟ್ ಪ್ರಾಧಿಕಾರ ಸಭೆಯ ನಡುವಳಿಗಳು.

**ಉಲ್ಲೇಖ:** 1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (27)(28)(2).

2. ಮಾನ್ಯ ಕುಲಪತಿಗಳು ಸಭೆ ನಡೆಸಲು ನೀಡಿದ ಅನುಮೋದನೆ ದಿ: 22.07.2025.

3. ಸಿಂಡಿಕೇಟ್ ಪ್ರಾಧಿಕಾರ ಸಭೆ ನೋಟಿಸ್ ದಿನಾಂಕ: 22.07.2025.

**<u>ಪ್ರಸ್ತಾವನೆ:</u>**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ಪ್ರಕರಣ (28)(2)ರ ಅನುಗುಣವಾಗಿ ಸಿಂಡಿಕೇಟ್ ಪ್ರಾಧಿಕಾರದ 95ನೇ ಹಾಗೂ 2025 ನೇ ಸಾಲಿನ 6 ನೇ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು ದಿನಾಂಕ: 12.08.2025 ರಂದು ಪೂರ್ವಾಹ್ನ 11.30 ಘಂಟೆಗೆ ಸಿಂಡಿಕೇಟ್ ಸಭಾಗಂಣದಲ್ಲಿ ಆಯೋಜಿಸಲಾಗಿತ್ತು. ಸಿಂಡಿಕೇಟ್ ಸದಸ್ಯರಾಗಿ ಆಯ್ಕೆಯಾಗಿರುವ ಪ್ರೊ. ವ್ಹಿ. ಎಸ್. ಶೀಗೆಹಳ್ಳಿ, ಹಿರಿಯ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ ಮತ್ತು ಪ್ರೊ. ವಿನಾಯಕ ಬಂಕಾಪೂರ, ಪ್ರಾಧ್ಯಾಪಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಇವರುಗಳಿಗೆ ಹೂಗುಚ್ಛ ನೀಡಿ ಸಭೆಗೆ ಬರಮಾಡಿಕೊಳ್ಳಲಾಯಿತು. ತದನಂತರ, ಕುಲಸಚಿವರು ಸಭೆಯ ಅಧ್ಯಕ್ಷರು, ಮತ್ತು ಎಲ್ಲ ಸದಸ್ಯರುಗಳನ್ನು ಸ್ವಾಗತಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನ್ಯ ಕುಲಪತಿಗಳು, ಮುಂಬೈ ಐಐಟಿ ಇವರಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ "ಎಮರ್ಜಿಂಗ್ ಯುನಿವರ್ಸಿಟಿ ಅವಾರ್ಡ–2025" ಲಭಿಸಿರುವುದಕ್ಕೆ ಹರ್ಷ ವ್ಯಕ್ತಪಡಿಸಿ, ವಿಶ್ವವಿದ್ಯಾಲಯದ ಅಧಿಕಾರಿಗಳು, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ್ ಪರಿಷತ್ ಸದಸ್ಯರುಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ಈ ಪ್ರಶಸ್ತಿಯಿಂದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಹಾಗೂ ಸಂಯೋಜಿತ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು FOSSEE GIS ಯೋಜನೆಯ ವಿವಿಧ ಶಿಬಿರ ಹಾಗೂ ಕಾರ್ಯಕ್ರಮಗಳಲ್ಲಿ ಭಾಗವಹಿಸಬಹುದಾಗಿದೆ. Fellowship ಗಾಗಿ ಸರ್ಕಾರದಿಂದ 5 ಕೋಟಿ ರೂಪಾಯಿಗಳ ಅನುದಾನ ದೊರೆಯುವ ಅವಕಾಶಗಳಿವೆ. ಜೊತೆಗೆ, ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಬಸವರಾಜ ಬಗಾಡೆ ಅವರು "ನ್ಯಾಷನಲ್ ಜಿಯೋಸ್ಪೆಷಿಯಲ್ ಎಮರ್ಜಿಂಗ್ ಫ್ಯಾಕಲ್ಟಿ ಫೆಲೋ ಅವಾರ್ಡ" ಗೆ ಆಯ್ಕೆಯಾಗಿರುವುದಕ್ಕೆ ಮಾನ್ಯ ಕುಲಪತಿಗಳು ಅಭಿನಂದನೆ ತಿಳಿಸಿದರು. ನಿವೃತ್ತ ನ್ಯಾಯಮೂರ್ತಿಗಳಾದ ಡಾ. ಎಚ್. ಎನ್. ನಾಗಮೋಹನದಾಸ್ ಇವರ "ಸಂವಿಧಾನ ಓದು" ಪುಸ್ತಕವನ್ನು ವಿಶ್ವವಿದ್ಯಾಲಯದ ಮರಾಠಿ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ಎಂ.ಎಂ. ಮುತಾವಳಿ ಇವರು ಸಂಪೂರ್ಣವಾಗಿ ಮರಾಠಿಗೆ ಭಾಷಾಂತರಿಸಿದ್ದು ಮಾನ್ಯರು ಪ್ರಶಂಸೆ ವ್ಯಕ್ತಪಡಿಸಿರುತ್ತಾರೆ. ಪ್ರಾಧ್ಯಾಪಕರಾದ ಪ್ರೊ. ಜೆ. ಮಂಜಣ್ಣ ಇವರು ದೇಶದ 2% ಹೆಸರಾಂತ ವಿಜ್ಞಾನಿಗಳಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡಿರುತ್ತಾರೆ ಹಾಗೂ ಪ್ರೊ. ಚಂದ್ರಿಕಾ.ಕೆ.ಬಿ. ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ ಇವರಿಗೆ "ಹಿಂದುಳಿದ ಅಲೆಮಾರಿ/ಅರೆ ಅಲೆಮಾರಿ ಘಿಸಾಡಿ ಸಮುದಾಯದ ಕುಲಶಾಸ್ತ್ರೀಯ" ಅಧ್ಯಯನ ಎಂಬ ವಿಷಯದ ಸಂಶೋಧನೆಗಾಗಿ ರೂ. 15 ಲಕ್ಷಗಳ ಮಂಜೂರಾಗಿರುತ್ತದೆ. 2025–26 ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸ್‌ಗಳಿಗೆ 42000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು, ಸ್ನಾತಕೋತ್ತರ ಕೋರ್ಸ್‌ಗಳಿಗೂ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಿರುತ್ತಾರೆ. ವಿಶೇಷವಾಗಿ ಮರಾಠಿ ವಿಭಾಗಕ್ಕೆ ಹೊರ ರಾಜ್ಯದಿಂದ 57 ಪ್ರವೇಶಾತಿ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಹೀಗೆ ವಿಶ್ವವಿದ್ಯಾಲಯದ ಪ್ರಗತಿಯ ಕುರಿತಾಗಿ ಕುಲಪತಿಗಳು ಸಭೆಗೆ ಮಾಹಿತಿ ನೀಡಿದರು.

ತದನಂತರ, ಕುಲಸಚಿವರು ಈ ಕೆಳಕಾಣಿಸಿದಂತೆ ವಿಷಯಸೂಚಿಗಳನ್ನು ಪ್ರಸ್ತಾಪಿಸಲಾಯಿತು.

**ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 95ನೇ ಹಾಗೂ 2025 ನೇ ಸಾಲಿನ 6ನೇ ಸಾಮಾನ್ಯ ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಅನುಗುಣವಾಗಿ ದಿನಾಂಕ 12-08-2025 ರಂದು ಕೈಗೊಂಡ ತೀರ್ಮಾನಗಳು.**

| | ಸಂಖ್ಯೆ | ಕಾರ್ಯಸೂಚಿ ವಿವರ ಹಾಗೂ ಕೈಗೊಂಡ ತೀರ್ಮಾನಗಳು |
|---|---|---|
| 01 | 2025/08/01 | ದಿನಾಂಕ: 08.07.2025 ರಂದು ಜರುಗಿದ ಸಭೆಯ ಗೊತ್ತುವಳಿ ಹಾಗೂ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ದೃಢೀಕರಣಕ್ಕಾಗಿ ಸಭೆಗೆ ಮಂಡಿಸಲಾಯಿತು.<br>ವಿಷಯಸೂಚಿ ಸಂಖ್ಯೆ:2025/07/04: ಅಂತರ ವಿಶ್ವವಿದ್ಯಾಲಯದಡಿ ವರ್ಗಾವಣೆಗೆ ವಿನಂತಿಸಿದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಒಂದು ವರ್ಷದ ಅವಧಿಗೆ ಸೀಮಿತಗೊಳಿಸಿ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಲು ತೀರ್ಮಾನಿಸಲಾಗಿತ್ತು. ಮುಂದುವರೆದು, ಒಂದು ವರ್ಷದ ಅವಧಿಯ ಷರತ್ತನ್ನು ಹಿಂಪಡೆಯಲು ಸಭೆಯು ತೀರ್ಮಾನಿಸಿತು.<br>ವಿಷಯಸೂಚಿ ಸಂಖ್ಯೆ: **2025/07/07** ರಲ್ಲಿ ತಿಳಿಸಲಾದ PG Diploma Course ಗಳಲ್ಲಿನ Ambedkar Studies ಕೋರ್ಸ್ ಕುರಿತು ಪ್ರಸ್ತಾಪಿಸಿದ ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ ಇವರ ಜೀವನ ಚರಿತ್ರೆ, ವಿಚಾರಧಾರೆ, ಶಿಕ್ಷಣ, ವಿವಿಧ ಕ್ಷೇತ್ರಗಳಲ್ಲಿ ಮಾಡಿರುವ ಸಾಧನೆ, ಸಮಾಜ ಸೇವೆ, ರಾಜಕೀಯ ಮತ್ತು ಸಂವಿಧಾನ ರಚನೆ ಕುರಿತಾಗಿ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ ಎಲ್ಲರೂ ಕೂಡ ತಿಳಿದುಕೊಳ್ಳುವುದು ಅವಶ್ಯವಿರುತ್ತದೆ. ಕಾರಣ, ವಿಶ್ವವಿದ್ಯಾಲಯದಲ್ಲಿ ಮತ್ತು ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯಗಳಲ್ಲಿ ಸಂಜೆ ಈ ಕುರಿತಾಗಿ ತರಗತಿಗಳನ್ನು ಆಯೋಜಿಸುವುದು ಮತ್ತು ಪ್ರವೇಶಾತಿ ಶುಲ್ಕದಲ್ಲಿ ರಿಯಾಯಿತಿ ನೀಡುವುದು ಮತ್ತು ಪೂರ್ಣ ಪ್ರಮಾಣದಲ್ಲಿ ನಿರ್ದೇಶಕರನ್ನು ನೇಮಿಸಲು ಪ್ರಸ್ತಾಪಿಸಿದರು. ಈ ಕುರಿತಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.<br>ವಿಷಯಸೂಚಿ ಸಂಖ್ಯೆ:2025/07/17:<br>ಡಾ. ಕಾವೇರಿ.ಎಚ್.ಎಂ.<br>Skill Development ಕೋರ್ಸ್ ಪ್ರಾರಂಭಿಸುವ ಕುರಿತಾಗಿ ಸ್ಥಳೀಯ ಕೈಗಾರಿಕಾ ಅಥವಾ ಕಂಪನಿಗಳಿಗೆ ಭೇಟಿ ನೀಡಿ ಅವಶ್ಯವಿರುವ ಕೌಶಲ್ಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸುವ ಕುರಿತಾಗಿ ತಾವು ನೀಡಿದ ಅಭಿಪ್ರಾಯವನ್ನು ಮತ್ತೊಮ್ಮೆ ಸಭೆಯ ಗಮನಕ್ಕೆ ತಂದು, ಸ್ಥಳೀಯ ಕೈಗಾರಿಕಾ ಅಥವಾ ಕಂಪನಿಗಳು ನೇಮಕಾತಿಯಲ್ಲಿ ಯುವಕರಿಗೆ(Freshers) ಹೆಚ್ಚಿನ ಆದ್ಯತೆ ನೀಡುತ್ತಾರೆ. 4 ಮತ್ತು 5 ವರ್ಷದ ಸೇವಾವಧಿಯ ನಂತರ ಕೆಲಸದಿಂದ ತೆಗೆದು ಹಾಕುತ್ತಾರೆ. ಸೇವಾ ಪೂರ್ವದಲ್ಲಿ ಸಿಬ್ಬಂದಿಗಳಿಗೆ ತರಬೇತಿಯನ್ನು ಕೂಡ ನೀಡುತ್ತಾರೆ. ಈಗ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸಲಾಗುವ Skill Development ಕೋರ್ಸ್‌ನ ಪಠ್ಯಕ್ರಮದಲ್ಲಿ ಸ್ಥಳೀಯ ಕೈಗಾರಿಕಾ ಅಥವಾ ಕಂಪನಿಗಳಿಗೆ ಅವಶ್ಯವಿರುವ ಪಠ್ಯಕ್ರಮವನ್ನು ಅಳವಡಿಸುವುದರಿಂದ ವಿದ್ಯಾರ್ಥಿಗಳು ಕಲಿಕಾ ಹಂತದಲ್ಲಿಯೇ ಪರಿಣಿತಿ ಹೊಂದುವುದರಿಂದ ಕಂಪನಿಗಳು ಆಯೋಜಿಸುವ ತರಬೇತಿಯ ವೆಚ್ಚದಲ್ಲಿ ಕಡಿತವಾಗುತ್ತದೆ. ಕಾರಣ, ಈ ವಿಷಯಕ್ಕೆ ಸಂಬಂಧಿಸಿದಂತೆ ಕೈಗಾರಿಕಾ ಅಥವಾ ಕಂಪನಿಗಳು ವಿದ್ಯಾರ್ಥಿಗಳಿಗೆ ನೀಡುವ ಉದ್ಯೋಗದಲ್ಲಿ "ಸೇವಾ ಭದ್ರತೆ" ನೀಡುವಂತೆ ಕ್ರಮ ವಹಿಸಲು ತಿಳಿಸಿದರು.<br>ತದನಂತರ, ದಿನಾಂಕ **08.07.2025** ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ಗೊತ್ತುವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| 02 | 2025/08/02 | ಕರ್ನಾಟಕ ರಾಜ್ಯ ನಾಗರೀಕ ಸೇವಾ(ನಡತೆ) ನಿಯಮಗಳು-2021 ಮತ್ತು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957 ಗಳಲ್ಲಿನ ಕೆಲವು ನಿಯಮಗಳನ್ನು ಅಳವಡಿಸುವ ಕುರಿತು. |

<table>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯವು 2010 ರಲ್ಲಿ ಮಾತೃ ಸಂಸ್ಥೆಯಾದ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದಿಂದ ಬೇರ್ಪಟ್ಟು ಸ್ವತಂತ್ರ ವಿಶ್ವವಿದ್ಯಾಲಯವಾಗಿ ಘೋಷಣೆಯಾಗಿರುತ್ತದೆ. ಆದರೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕೆಲವು ಪರಿನಿಯಮಗಳು ಗೌರವಾನ್ವಿತ ರಾಜ್ಯಪಾಲರಿಂದ ಅನುಮೋದನೆಗೊಂಡಿರದ ಕಾರಣ ಮಾತೃ ಸಂಸ್ಥೆಯಾದ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಪರಿನಿಯಮಗಳನ್ನು ಅನುಸರಿಸಲಾಗುತ್ತಿದೆ. ಉದಾಹರಣೆಗೆ Karnataka University Employees Service(Conduct) Rules 1993 ಮತ್ತು ಕರ್ನಾಟಕ ವಿಶ್ವವಿದ್ಯಾಲಯದ, ನೌಕರರ ವರ್ಗೀಕರಣ ನಿಯಂತ್ರಣ ಮತ್ತು ಅಪೀಲು ನಿಯಮಗಳು-1998. ಸದರಿ ನಿಯಮಗಳು ಕಾಲಕ್ಕೆ ತಕ್ಕಂತೆ ನವೀಕೃತಗೊಳ್ಳದೇ ಇರುವುದರಿಂದ ಕರ್ನಾಟಕ ಸರ್ಕಾರದ ಕರ್ನಾಟಕ ರಾಜ್ಯ ನಾಗರೀಕ ಸೇವಾ(ನಡತೆ) ನಿಯಮಗಳು-2021 ಮತ್ತು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957 ಗಳ ನಿಯಮಾವಳಿಗಳನ್ನು ಅನುಸರಿಸುವುದು ಅವಶ್ಯವಿರುತ್ತದೆ. ಕಾರಣ, ಪ್ರಸ್ತುತ ಚಾಲ್ತಿಯಲ್ಲಿರುವ ಶಿಸ್ತು ಕ್ರಮದ ಪ್ರಕರಣಗಳಿಗೆ ಮತ್ತು ಮುಂದಿನ ಎಲ್ಲಾ ಪ್ರಕರಣಗಳಿಗೆ ಕರ್ನಾಟಕ ರಾಜ್ಯ ನಾಗರೀಕ ಸೇವಾ(ನಡತೆ) ನಿಯಮಗಳು-2021 ಮತ್ತು ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957 ಗಳ ನಿಯಮಾವಳಿಗಳನ್ನು ಅನುಸರಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.</td></tr>
<tr><td>03</td><td>2025/08/03</td><td>ಪ್ರೊ. ವ್ಹಿ. ಎಫ್. ನಾಗಣ್ಣವರ, ಹಿರಿಯ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರಿಗೆ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ಅನುಮತಿ ನೀಡಿರುವುದ್ದಕ್ಕೆ ಸಭೆಯ ಅನುಸಮರ್ಥನೆಗೆ ಮಂಡಿಸಿರುವ ಕುರಿತು.</td></tr>
<tr><td colspan="2">ತೀರ್ಮಾನ</td><td>ಪ್ರೊ. ವ್ಹಿ. ಎಫ್. ನಾಗಣ್ಣವರ, ಹಿರಿಯ ಪ್ರಾಧ್ಯಾಪಕರು, ಇಂಗ್ಲೀಷ ವಿಭಾಗ ಇವರಿಗೆ ಈ ಕೆಳಕಾಣಿಸಿದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ಹುದ್ದೆಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಭೆಯು ಅನುಸಮರ್ಥನೆ ನೀಡಿತು.
<table>
<tr><th>SL</th><th>Details of Permission to apply</th><th>Post applied/Subject</th></tr>
<tr><td>1</td><td>Sindhu Central University, Vill.Khaltsi, Distt.Leh, UT of Ladakh(India)-194 106.</td><td>Vice-Chancellor</td></tr>
<tr><td>2</td><td>Central University of Odisha, Sunabeda, NAD Post Office, Koraput-763 004, Odisha.</td><td>Vice-Chancellor</td></tr>
</table></td></tr>
<tr><td>04</td><td>2025/08/04</td><td>ಶ್ರೀಮತಿ ದೀಪಾ, ದ್ವಿತೀಯ ದರ್ಜೆ ಸಹಾಯಕರು ಇವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣದ ಮೂಲಕ ಬಿ.ಎ. ಸ್ನಾತಕ ಕೋರ್ಸಿನ ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಿರುವ ಕುರಿತು.</td></tr>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ದೀಪಾ ಇವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣದ ಮೂಲಕ ಬಿ.ಎ. ಸ್ನಾತಕ ಕೋರ್ಸಿನ ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡಲಾಗಿದೆ. ಸದರಿ ವಿಷಯವನ್ನು ಪರಿಶೀಲಿಸಿ ಸಭೆಯು ಅನುಸಮರ್ಥನೆ ನೀಡಿತು.</td></tr>
<tr><td>05</td><td>2025/08/05</td><td>ಶ್ರೀ ಶಶಿಧರ ಉತ್ನಾಳ, ಪ್ರಥಮ ದರ್ಜೆ ಸಹಾಯಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರು ಅನಧೀಕೃತ ಗೈರು ಹಾಜರಿರುವ ಕುರಿತು.</td></tr>
<tr><td colspan="2">ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಶಶಿಧರ ಉತ್ನಾಳ ಇವರು ಜನವರಿ ತಿಂಗಳಿನಲ್ಲಿ-05 ದಿನಗಳು, ಫೆಬ್ರುವರಿ ತಿಂಗಳಿನಲ್ಲಿ 21 ದಿನಗಳು ಮತ್ತು ಮಾರ್ಚ ತಿಂಗಳಿನಲ್ಲಿಯೂ ಕೂಡ ಅನಧೀಕೃತ ಗೈರುಹಾಜರಾಗಿರುವ ಹಿನ್ನೆಲೆಯಲ್ಲಿ ದಿನಾಂಕ: 10.03.2025 ರಂದು ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗಿತ್ತು. ಅಲ್ಲದೇ, ಮಾರ್ಚ್ ತಿಂಗಳಿನಿಂದ ವೇತನ ಬಟವಡೆ ಮಾಡದೇ ಮುಂದಿನ ಆದೇಶದವರೆಗೆ ವೇತನ ತಡೆಹಿಡಿಯುವಂತೆ ಹಣಕಾಸು ಅಧಿಕಾರಿಗಳಿಗೆ ಆದೇಶ ಹೊರಡಿಸಲಾಗಿದೆ. ತದನಂತರ ಸದರಿ ಸಿಬ್ಬಂದಿಯು ತಾನು ತೀವ್ರ</td></tr>
</table>

| | | |
|---|---|---|
| | | ಅನಾರೋಗ್ಯದಿಂದ ಬಳಲುತ್ತಿದ್ದು ವೈದ್ಯರ ಸಲಹೆ ಮೇರೆಗೆ ವಿಶ್ರಾಂತಿ ಪಡೆಯುತ್ತಿರುವ ಹಿನ್ನೆಲೆಯಲ್ಲಿ ತನ್ನ ವೇತನ ತಡೆಹಿಡಿಯದಂತೆ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಲಗತ್ತಿಸಿ ದಿನಾಂಕ: **13.03.2025** ರಂದು ಕರ್ತವ್ಯಕ್ಕೆ ಹಾಜರಾಗಿ ತದನಂತರದ ದಿನಗಳಿಂದ ಇಲ್ಲಿಯವರೆಗೆ ಮತ್ತೆ ಅನಧೀಕೃತ ಗೈರು ಹಾಜರಾಗಿರುವ ಮಾಹಿತಿಯನ್ನು ಕುಲಸಚಿವರು ಸಭೆಗೆ ನೀಡಿದರು.<br>ಪರಿಶೀಲಿಸಿದ ಸಭೆಯು, ಅನಾರೋಗ್ಯದಿಂದ ಬಳಲುತ್ತಿರುವುದಾಗಿ ತಿಳಿಸಿರುವುದರಿಂದ ಮಾನವೀಯ ಹಿತದೃಷ್ಠಿಯಿಂದ ಅರ್ಜಿಯನ್ನು ಪರಿಶೀಲಿಸಿ ತದನಂತರ ಶಿಸ್ತು ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು. |
| 06 | 2025/08/06 | ಶ್ರೀಮತಿ ಶಕುಂತಲಾ ಕೆ.ಜಿ.ಎನ್., ಪ್ರಥಮ ದರ್ಜೆ ಸಹಾಯಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ ಇವರನ್ನು ಕುವೆಂಪು ವಿಶ್ವವಿದ್ಯಾಲಯಕ್ಕೆ ಹುದ್ದೆ ರಹಿತವಾಗಿ ವರ್ಗಾವಣೆ ಮಾಡಿ ಸರ್ಕಾರ ಆದೇಶಿಸಿರುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಶಕುಂತಲಾ ಕೆ.ಜಿ.ಎನ್., ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-**2000** ರ ಪ್ರಕರಣ **58** ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕುವೆಂಪು ವಿಶ್ವವಿದ್ಯಾಲಯಕ್ಕೆ ಅವರ ಮೂಲ ಹುದ್ದೆಗನುಗುಣವಾಗಿ ಹುದ್ದೆ ರಹಿತವಾಗಿ ಕೆಲ ಷರತ್ತುಗಳಿಗೊಳಪಟ್ಟು ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಮಾಡಿ ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು-1) ಇವರು ದಿನಾಂಕ: **22.07.2025** ರಂದು ಆದೇಶಿಸಿರುತ್ತಾರೆ. ಸದರಿ ವಿಷಯವನ್ನು ಪರಿಶೀಲಿಸಿ ಸರ್ಕಾರದ ಆದೇಶದಂತೆ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿಗೆ ಹುದ್ದೆ ರಹಿತವಾಗಿ ಅಂತರ ವಿಶ್ವವಿದ್ಯಾಲಯ ವರ್ಗಾವಣೆಗೆ ಸಭೆಯು ಅನುಮೋದನೆ ನೀಡಿತು. |
| 07 | 2025/08/07 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ 11 ರಿಂದ 12 ಸಹಾಯಕ ಪ್ರಾಧ್ಯಾಪಕರ ಹಂತದ ವೃತ್ತಿ ಪದೋನ್ನತಿಯ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಧ್ಯಾಪಕರುಗಳಿಗೆ ಸಿ.ಎ.ಎಸ್. ಅಡಿಯಲ್ಲಿ ವೃತ್ತಿ ಪದೋನ್ನತಿ ಹಂತ **11** ರಿಂದ **12** ಸಹಾಯಕ ಪ್ರಾಧ್ಯಾಪಕರ ಹಂತದ ವೃತ್ತಿ ಪದೋನ್ನತಿಗೆ ಸಂಬಂಧಿಸಿದಂತೆ ತಜ್ಞರನ್ನು ಒಳಗೊಂಡ **Screening-Cum-Evaluation** ಸಮಿತಿಯು ಅರ್ಜಿಗಳನ್ನು ಪರಿಶೀಲಿಸಿ ಸಲ್ಲಿಸಿದ ಶಿಫಾರಸ್ಸು ವರದಿಯನ್ನು ಪರಿಶೀಲಿಸಿ ಅನುಮೋದನೆ ನೀಡಿತು ಹಾಗೂ ಈ ಕೆಳಕಾಣಿಸಿದಂತೆ ಪದೋನ್ನತಿಯನ್ನು ನೀಡಲು ತೀರ್ಮಾನಿಸಿತು. |

| Sl No | Name of the Faculty | Departments | Academic Level |
|---|---|---|---|
| **01** | **Dr. T. R. Arunkumar** | **Computer Science** | **Assistant Professor (Senior Scale/Academic Level 11) to Assistant Professor (Selection Grade/Academic Level 12)** |
| **02** | **Dr.Bhushan A. Kanagalekar** | **Physics** | **Assistant Professor (Senior Scale/Academic Level 11) to Assistant Professor (Selection Grade/Academic Level 12)** |

| | | |
|---|---|---|
| 08 | 2025/08/08 | ಪ್ರೊ.ಕೆ.ಎಲ್.ಎನ್.ಮೂರ್ತಿ, ಪ್ರಾಧ್ಯಾಪಕರು, ಇತಿಹಾಸ ವಿಭಾಗ ಇವರನ್ನು ಅಮಾನತ್ತುಗೊಳಿಸಿರುವ ಕುರಿತು. |
| ತೀರ್ಮಾನ | | ಪ್ರೊ. ಕೆ.ಎಲ್.ಎನ್. ಮೂರ್ತಿ, ಪ್ರಾಧ್ಯಾಪಕರು, ಇತಿಹಾಸ ವಿಭಾಗ ಇವರನ್ನು ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ. ಸದರಿ ವಿಷಯಕ್ಕೆ ದಿನಾಂಕ: **23.07.2025** ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅನುಸಮರ್ಥನೆ ಪಡೆಯಲಾಗಿದೆ. ಮೇಲ್ನೋಟಕ್ಕೆ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ "ಆಂತರಿಕ ದೂರು ನಿವಾರಣಾ ಸಮಿತಿ" ಯು ಪ್ರಕರಣಕ್ಕೆ ಸಂಬಂಧಿಸಿ ಈ ಕೆಳಕಾಣಿಸಿದಂತೆ |

ಶಿಫಾರಸ್ಸು ನೀಡಿರುತ್ತದೆ.

ಪ್ರತಿವಾದಿಗೆ ನೀಡಿದ ಶಿಫಾರಸ್ಸು ಮಾಡಿದ ವಿವರ:

- ಸೇವಾ ನಿಯಮಾವಳಿಗಳನ್ವಯ ಪ್ರತಿವಾದಿಗೆ ಶಿಕ್ಷೆ ವಿಧಿಸುವುದು.
- ಪಿಎಚ್.ಡಿ. ಮಾರ್ಗದರ್ಶಕರ ಮಾನ್ಯತೆಯನ್ನು ಕನಿಷ್ಠ 3 ವರ್ಷಗಳ ಅವಧಿವರೆಗೆ ಅಮಾನತ್ತಿನಲ್ಲಿರಿಸುವುದು.
- POSH ಕಾಯ್ದೆಯ ಅಡಿಯಲ್ಲಿ ಸಂವೇದನೆ ಕುರಿತು ಕಡ್ಡಾಯ ತರಬೇತಿ ನೀಡುವುದು.

ಸಂತ್ರಸ್ತೆಗೆ(ನೊಂದಿತ) ಶಿಫಾರಸ್ಸು ಮಾಡಿದ ವಿವರ:

- ಪ್ರಕರಣವು ಇನ್ನು ತನಿಖಾ ಹಂತದಲ್ಲಿದ್ದಾಗ ಸಂತ್ರಸ್ತೆಯು ಅಂತಿಮ ವರದಿಯ ಪೂರ್ವದಲ್ಲಿಯೇ ಪ್ರಕರಣದ ಕುರಿತು ಸಾಮಾಜಿಕ ಮಾಧ್ಯಮ ಮತ್ತು ವಾಟ್ಸ್‌ಪ್ ವಿಡಿಯೋ ಸಂದೇಶಗಳನ್ನು ರವಾನಿಸಿ, ವಿಶ್ವವಿದ್ಯಾಲಯ ಮತ್ತು ಅಧಿಕಾರಿಗಳ ಘನತೆಗೆ ಧಕ್ಕೆ ಉಂಟಾಗುವ ಹಾಗೇ ವರ್ತಿಸಿದ್ದು ಈ ಕುರಿತಂತೆ ಕ್ಷಮಾಪಣೆ ಪತ್ರ ಸಲ್ಲಿಸುವಂತೆ ತಿಳಿಸುವುದು.
- ಪಿಎಚ್.ಡಿ. ಪದವಿ ಪ್ರದಾನವನ್ನು ತಡೆಹಿಡಿಯುವುದು.
- ದೂರುದಾರರಿಗೆ ಪರಿಹಾರ (ಪ್ರತಿವಾದಿಯು ಈಗಾಗಲೇ ರೂ. 20 ಲಕ್ಷ ರೂಪಾಯಿಗಳನ್ನು ಪರಿಹಾರವಾಗಿ ನೀಡಿರುವರು.

ಮುಂದುವರೆದು, "ಆಂತರಿಕ ದೂರು ನಿವಾರಣಾ ಸಮಿತಿ" ವರದಿ ಆಧರಿಸಿ ಸಕ್ಷಮ ಪ್ರಾಧಿಕಾರವು ಕರ್ನಾಟಕ ನಾಗರಿಕ ಸೇವಾ ನಿಯಮಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು–1957 ರ ನಿಯಮ 14. ಬಿ ಅನ್ವಯ ರುಜುವಾತಾದ ದುರ್ನಡತೆಯ ಗಂಭೀರತೆ ಮತ್ತು ಸ್ವರೂಪವನ್ನು ದೃಷ್ಟಿಯಲ್ಲಿಟ್ಟುಕೊಂಡು ನಿಯಮ 8(i) ರಿಂದ (viii) ರ ರವರೆಗೆ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ದಂಡನೆಗಳನ್ನು ವಿಧಿಸಬಹುದಾಗಿದೆ. ವಿಧಿಸಬಹುದಾದ ದಂಡನೆಗಳ ವಿವರವನ್ನು ಹಾಗೂ ಸಂತ್ರಸ್ತೆಯು ದಿನಾಂಕ:08.08.2025 ರಂದು ಪ್ರೊ. ಕೆ. ಎಲ್. ಎನ್. ಮೂರ್ತಿ ಅವರ ಮೇಲೆ ಮಾಡಿರುವ ಆರೋಪಗಳನ್ನು ಯಾವುದೇ ಒತ್ತಡವಿಲ್ಲದೆ ನಾನು ಮಾಡಲಾದ ದೂರನ್ನು ಹಿಂಪಡೆಯುತ್ತಿದ್ದೇನೆ ಎಂಬುದನ್ನು ತಿಳಿಸಿ, ಪ್ರೊ. ಕೆ.ಎಲ್.ಎನ್. ಮೂರ್ತಿ ಮೇಲೆ ಮುಂದೆ ಯಾವುದೇ ಕ್ರಮ ಜರುಗಿಸಬಾರದೆಂದು ವಿನಂತಿಸಿಕೊಂಡು, ದಿನಾಂಕ: 04.11.2025 ರ ಮೌಖಿಕ ದೂರು, ದಿನಾಂಕ: 26.11.2024 ಮತ್ತು 14.07.2025 ರಂದು ಲಿಖಿತವಾಗಿ ನೀಡುವ ದೂರುಗಳನ್ನು ಹಿಂಪಡೆಯಲು ವಿನಂತಿಸಿರುವ ಮಾಹಿತಿಯನ್ನು ಕುಲಸಚಿವರು ಸಭೆಗೆ ನೀಡಿದರು.

ಸದಸ್ಯರುಗಳು ಈ ಕೆಳಕಾಣಿಸಿದಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

1. ಕುಲಸಚಿವರು(ಮೌಲ್ಯಮಾಪನ):–

   ಮಾರ್ಗದರ್ಶಕರು ಮತ್ತು ಸಂಶೋಧನಾ ವಿದ್ಯಾರ್ಥಿ ಇಬ್ಬರಿಂದಲೂ ತಪ್ಪು ನಡೆದಿದ್ದು ಇಬ್ಬರಿಗೂ ಶಿಕ್ಷೆಯಾಗಬೇಕು. ಇದರಿಂದಾಗಿ ವಿಶ್ವವಿದ್ಯಾಲಯದ ಗೌರವಕ್ಕೆ ಚ್ಯುತಿ ಬಂದಿರುತ್ತದೆ. ಕಡ್ಡಾಯ ನಿವೃತ್ತಿಗೊಳಿಸುವುದು ಬೇಡ. ಸೇವೆಯನ್ನು ಕೆಳಗಿನ ಹಂತಕ್ಕೆ ಇಳಿಸುವುದು(Demotion) ಸೂಕ್ತ ಮತ್ತು ಪಿಎಚ್.ಡಿ. ಪದವಿಯನ್ನು ಹಿಂಪಡೆಯುವುದು.

2. ಪ್ರೊ. ವ್ಹಿ. ಎಸ್. ಶಿಗೇಹಳ್ಳಿ:

   ಸಂಶೋಧನಾ ವಿದ್ಯಾರ್ಥಿಯು ತಾವು ನೀಡಿರುವ ದೂರನ್ನು ಪ್ರಸ್ತುತ ಹಿಂಪಡೆದಿರುವುದಾಗಿ ಮನವಿ ಸಲ್ಲಿಸಿರುತ್ತಾರೆ. ಕಾರಣ, ಈ ವಿಷಯದ ಕುರಿತಾಗಿ ಮತ್ತೊಮ್ಮೆ ದೂರ ನೀಡಲು ಮುಂದಿನ ದಿನಗಳಲ್ಲಿ ಸಂಶೋಧನಾ ವಿದ್ಯಾರ್ಥಿನಿಗೆ ಅವಕಾಶ ಕಲ್ಪಿಸಬಾರದು. ಪಿಎಚ್.ಡಿ. ಪದವಿಯನ್ನು ಹಿಡಿದಿಟ್ಟುಕೊಳ್ಳುವುದು(Withheld) ಮತ್ತು ಪ್ರೊ. ಕೆ.ಎಲ್. ಮೂರ್ತಿ ಇವರಿಗೆ ಮಾರ್ಗದರ್ಶಕರ ಹುದ್ದೆಯಿಂದ ಬಹಿಷ್ಕರಿಸುವುದು.

3. ಶ್ರೀಮತಿ ಎಸ್. ಬಿ. ಢಂಗ:

ಆಂತರಿಕ ಸಮಿತಿ ನೀಡಿರುವ ವರದಿಯನ್ನು ಕೂಲಂಕುಷವಾಗಿ ಅಧ್ಯಯನ ನಡೆಸಿ ನ್ಯಾಯಯುತವಾಗಿ ನಿರ್ಧಾರ ತೆಗೆದುಕೊಳ್ಳುವುದು.

4. ಡಾ. ಕಾವೇರಿ. ಎಚ್. ಎಂ.,

ಆರು ತಿಂಗಳವರೆಗೆ ಅಮಾನತ್ತಿನ ಅವಧಿಯನ್ನು ಮುಂದುವರೆಸುವುದು. ಸಂಶೋಧನಾ ವಿದ್ಯಾರ್ಥಿನಿಗೆ ಪಿಎಚ್.ಡಿ. ಪದವಿಯನ್ನು ನೀಡುವುದು. ಪ್ರೊ.ಕೆ.ಎಲ್.ಎನ್. ಮೂರ್ತಿ ಇವರ ಮಾರ್ಗದರ್ಶನದಲ್ಲಿರುವ ಇನ್ನಿತರ ಸಂಶೋಧನಾ ವಿದ್ಯಾರ್ಥಿಗಳನ್ನು ಬೇರೆ ಮಾರ್ಗದರ್ಶಕರಿಗೆ ವರ್ಗಾಯಿಸುವುದು.

5. ಶ್ರೀ ರವೀಂದ್ರ ನಾಯ್ಕರ್:

ಸಂಶೋಧನಾ ವಿದ್ಯಾರ್ಥಿನಿಗೆ ಪಿಎಚ್.ಡಿ. ಪದವಿಯನ್ನು ನೀಡುವುದು. ಪ್ರೊ.ಕೆ.ಎಲ್.ಎನ್. ಮೂರ್ತಿ ಇವರ ಮೇಲೆ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸುವುದು.

6. ಶ್ರೀ ರಫೀ ಭಂಡಾರಿ:

ಈ ಪ್ರಕರಣದಿಂದಾಗಿ ವಿಶ್ವವಿದ್ಯಾಲಯದ ಘನತೆ ಮತ್ತು ಗೌರವಕ್ಕೆ ಧಕ್ಕೆ ಉಂಟಾಗಿದೆ. ಸಂಶೋಧನಾ ವಿದ್ಯಾರ್ಥಿನಿಗೆ ಪಿಎಚ್.ಡಿ. ಪದವಿಯನ್ನು ನೀಡುವುದು. ಆದರೆ, ವಿಶ್ವವಿದ್ಯಾಲಯದ ಪ್ರತಿಷ್ಠಿತ ಘಟಿಕೋತ್ಸವ ಸಮಾರಂಭದಲ್ಲಿ ಸದರಿ ಸಂಶೋಧನಾ ವಿದ್ಯಾರ್ಥಿನಿಗೆ ಪಿಎಚ್.ಡಿ. ಪದವಿಯನ್ನು ವಿತರಿಸಕೂಡದು ಹಾಗೂ ಸಮಾರಂಭಕ್ಕೆ ಆಹ್ವಾನಿಸ ತಕ್ಕದ್ದಲ್ಲ. ಇನ್ನು ಪ್ರೊ.ಕೆ.ಎಲ್.ಎನ್. ಮೂರ್ತಿ ಇವರಿಗೆ ಬೋಧನಾ ಕಾರ್ಯಕ್ಕೆ ತೊಡಗಿಸುವ ಬದಲಾಗಿ ಬೋಧಕೇತರ ಸಿಬ್ಬಂದಿಗಳ (Table Work) ಕಾರ್ಯಕ್ಕೆ ನಿಯೋಜಿಸುವುದು.

7. ಶ್ರೀ ಮಹಾಂತೇಶ ಕಂಬಾರ:

ದೂರುದಾರರು ಮತ್ತು ಆಪಾದಿತರು ಇಬ್ಬರಿಂದಲೂ ತಪ್ಪಾಗಿರುತ್ತದೆ. ಈಗ ಪರಸ್ಪರ ಒಪ್ಪಂದ ಮಾಡಿಕೊಂಡಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಅಭಿಪ್ರಾಯವನ್ನು ಪಡೆಯುವುದು. ಸಂಶೋಧನಾ ವಿದ್ಯಾರ್ಥಿನಿಯು ಶೈಕ್ಷಣಿಕ ಚಟುವಟಿಕೆಯಲ್ಲಿ ಉತ್ತಮರಾಗಿರುವುದರಿಂದ ಪಿಎಚ್.ಡಿ. ಪದವಿಯನ್ನು ಹಿಂಪಡೆಯಲು ಸಾಧ್ಯವಿಲ್ಲ. ಕಾರಣ, ಪಿಎಚ್.ಡಿ. ಪದವಿಯನ್ನು ನೀಡುವುದು. ಈ ಪ್ರಕರಣದಿಂದಾಗಿ ವಿಶ್ವವಿದ್ಯಾಲಯದ ಹೆಸರು ಹಾಳಾಗಿದೆ. ಕಾರಣ, ಪ್ರೊ.ಕೆ.ಎಲ್.ಎನ್. ಮೂರ್ತಿ ಮತ್ತು ಸಂಶೋಧನಾ ವಿದ್ಯಾರ್ಥಿನಿಯ ಶ್ರೀಮತಿ ಸುಜಾತಾ ಪೋಳ ಇವರುಗಳಿಗೆ ನೋಟಿಸ್ ಜಾರಿ ಮಾಡುವುದು.

8. ಡಾ. ಮಾರುತಿ ಮುಂಡರಗಿ:

ಇಬ್ಬರಿಂದಲೂ ತಪ್ಪು ಜರುಗಿದ್ದು, ಪ್ರೊ.ಕೆ.ಎಲ್.ಎನ್. ಮೂರ್ತಿ ಇವರಿಗೆ ಕಡ್ಡಾಯ ನಿವೃತ್ತಿಗೊಳಿಸಿ ಗೌರವದಿಂದ ಕಳುಹಿಸಿ ಕೊಡುವುದು.

9. ಡಾ. ಎಸ್. ಎಸ್. ಅಂಗಡಿ:

ಮಾನವೀಯ ದೃಷ್ಠಿಯಿಂದ ಹಾಗೂ ಕಾನೂನು ಅಭಿಪ್ರಾಯ ಪಡೆದು ಸೂಕ್ತ ಕ್ರಮ ಕೈಗೊಳ್ಳುವುದು.

10. ಶ್ರೀ. ಎಸ್. ಎ. ದೇಶಮುಖ್:

ಆರು ತಿಂಗಳ ಅವಧಿಯವರೆಗೆ ಸಂಶೋಧನಾ ವಿದ್ಯಾರ್ಥಿನಿಯ ಪಿಎಚ್.ಡಿ. ಪದವಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯುವುದು.

11. ಶ್ರೀ ಜಗದೀಶ ಜೋಡಂಗಿ:

ಪಿಎಚ್.ಡಿ. ಪದವಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯುವುದು ಮತ್ತು ಕಾನೂನು ಪ್ರಕಾರ ಶಿಕ್ಷೆ ವಿಧಿಸುವುದು.

12. ಶ್ರೀ. ಆರ್. ಎಂ. ದೇವರೆಡ್ಡಿ:

ಬೇರೆ–ಬೇರೆ ವಿಶ್ವವಿದ್ಯಾಲಯಗಳಲ್ಲಿ 1 ರಿಂದ 2% ರಷ್ಟು ಈ ರೀತಿಯ ಪ್ರಕರಣಗಳು ಸಾಮಾನ್ಯವಾಗಿರುತ್ತವೆ. ಇಂತಹ ಘಟನೆಗಳು ಮರುಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳುವುದು ಅವಶ್ಯವಿರುತ್ತದೆ. ಕಾರಣ, ಪ್ರೊ. ಕೆ.ಎಲ್.ಎನ್. ಮೂರ್ತಿ ಇವರ

| | | |
|---|---|---|
| | | ಸೇವೆಯನ್ನು ಕೆಳಗಿನ ಹಂತಕ್ಕೆ ಇಳಿಸುವುದು(Demotion) ಮತ್ತು ಮಾರ್ಗದರ್ಶಕ ಹುದ್ದೆಯನ್ನು ಹಿಂಪಡೆಯುವುದು. ವಿಶ್ವವಿದ್ಯಾಲಯದ ಘನತೆ ಹಾಳಾಗಿರುವ ಕಾರಣ ಅಂತರ ವಿಶ್ವವಿದ್ಯಾಲಯ ವರ್ಗಾವಣೆಯಡಿ ಅರ್ಜಿ ಸಲಿಸಿದ್ದಲ್ಲಿ ಬೇರೆ ವಿಶ್ವವಿದ್ಯಾಲಯಕ್ಕೆ ಸದರಿಯವರನ್ನು ವರ್ಗಾಯಿಸುವುದು. ಸಂಶೋಧನಾ ವಿದ್ಯಾರ್ಥಿನಿಗೆ ಪಿಎಚ್.ಡಿ. ಪದವಿ ನೀಡುವುದು.<br>**13. ಶ್ರೀ ಈರಣ್ಣ ಹಪ್ಪಲಿ:**<br>ಸಂಶೋಧನಾ ವಿದ್ಯಾರ್ಥಿನಿಯು ಮೊದಲು ದೂರು ನೀಡಿ ನಂತರ ದೂರನ್ನು ಹಿಂಪಡೆಯಲು ವಿನಂತಿಸಿರುತ್ತಾರೆ. ಇದು ಹಣದ ಆಮಿಷದಿಂದಾಗಿ ಮಾಡಿರಬಹುದಾಗಿದೆ. ಕಾರಣ, ವಿದ್ಯಾರ್ಥಿನಿಯ ಪಿಎಚ್.ಡಿ. ಪದವಿಯನ್ನು ತಡೆಹಿಡಿಯುವುದು. ಪ್ರೊ.ಕೆ.ಎಲ್.ಎನ್. ಮೂರ್ತಿ ಇವರನ್ನು ಸೇವೆಯಿಂದ ವಜಾಗೊಳಿಸಿ (Dismiss) ಕಠಿಣ ಕ್ರಮ ಕೈಗೊಳ್ಳುವುದು.<br>**14. ಶ್ರೀ ವಿನೀತ್ ಜೋಶಿ:**<br>ಇಬ್ಬರೂ ತಪ್ಪಿತಸ್ಥರಾಗಿದ್ದು ಕಠಿಣ ಶಿಕ್ಷೆ ವಿಧಿಸುವುದು.<br>**15. ಪ್ರೊ. ವಿನಾಯಕ ಬಂಕಾಪೂರ:**<br>ನಿಯಮಾನುಸಾರ ಕ್ರಮ ಜರುಗಿಸುವುದು.<br>ಸುದೀರ್ಘವಾಗಿ ಚರ್ಚಿಸಿ ಸಭೆಯು, ಇಬ್ಬರೂ ತಪ್ಪಿತಸ್ಥರು ಎಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದರು. ಕರ್ನಾಟಕ ನಾಗರಿಕ ಸೇವಾ ನಿಯಮಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು–1957 ರ ನಿಯಮ 14. ಬಿ ಹಾಗೂ ನಿಯಮ **8(i)** ರಿಂದ **(viii)** ರ ರವರೆಗೆ ನಿರ್ದಿಷ್ಟಪಡಿಸಿದ ದಂಡನೆಗಳನ್ನು ವಿಧಿಸುವ ಪೂರ್ವದಲ್ಲಿ ಆರೋಪಿತರಿಗೆ ಹೇಳಿಕೆ ನೀಡಲು ಅವಕಾಶ ನೀಡತಕ್ಕದು ಎಂಬ ನಿಯಮವಿರುವುದರಿಂದ ಈ ಕುರಿತಾಗಿ ಪ್ರೊ. ಕೆ.ಎಲ್.ಎನ್. ಮೂರ್ತಿ ಮತ್ತು ಶ್ರೀಮತಿ ಸುಜಾತಾ ಪೋಳ ಇವರುಗಳಿಗೆ ಶಿಸ್ತು ಕ್ರಮ ಏಕೆ ಜರುಗಿಸಬಾರದೆಂದು ನೋಟಿಸ್ ಜಾರಿ ಮಾಡಲು ಸಭೆಯು ತೀರ್ಮಾನಿಸಿತು. |
| 09 | 2025/08/09 | 2025–26ನೇ ಶೈಕ್ಷಣಿಕ ಸಾಲಿಗೆ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯ ವಿವಿಧ ಸ್ನಾತಕ ವಿಷಯಗಳಿಗೆ ತಾತ್ಕಾಲಿಕ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡಿರುವ ಕುರಿತು. |
| | ತೀರ್ಮಾನ | **2025–26 ನೇ ಶೈಕ್ಷಣಿಕ ಸಾಲಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ಹೆಚ್ಚುವರಿ ಬೋಧನಾ ಕಾರ್ಯಭಾರದ ನಿರ್ವಹಣೆಗಾಗಿ 2025–26ನೇ ಶೈಕ್ಷಣಿಕ ಸಾಲಿಗೆ ವಿವಿಧ ಸ್ನಾತಕ ವಿಷಯಗಳಿಗೆ ತಾತ್ಕಾಲಿಕ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಅಭ್ಯರ್ಥಿಗಳ ವಿವರವನ್ನು ಪರಿಶೀಲಿಸಿ ಸಭೆಯು ಅನುಸಮರ್ಥನೆ ನೀಡಿತು.** |
| 10 | 2025/08/10 | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಅತಿಥಿ ಉಪನ್ಯಾಸಕರ ಗೌರವ ಧನವನ್ನು ಹೆಚ್ಚಿಸುವ ಕುರಿತು. |
| | ತೀರ್ಮಾನ | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯಲ್ಲಿ ವಿವಿಧ ವಿಷಯಗಳಿಗೆ ಬೋಧನೆ ಮಾಡಲು ತಾತ್ಕಾಲಿಕ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಮುಂದುವರೆದು, ದೈನಂದಿನ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜೀವನ ವೆಚ್ಚವು ಗಣನೀಯವಾಗಿ ಹೆಚ್ಚಾಗಿದೆ. ಕಾರಣ, ಅತಿಥಿ ಉಪನ್ಯಾಸಕರ ಸಂಭಾವಣೆಯನ್ನು ಹೆಚ್ಚಿಸುವ ಪ್ರಸ್ತಾವವನ್ನು ಸಭೆಗೆ ಮಂಡಿಸಿದ ಹಿನ್ನೆಲೆಯಲ್ಲಿ ಸಭೆಯು ಈ ಕೆಳಕಾಣಿಸಿದಂತೆ ಗೌರವ ಧನವನ್ನು ಹೆಚ್ಚಿಸಲು ತೀರ್ಮಾನಿಸಿತು. ಮುಂದುವರೆದು, ಸೇವಾ ಅನುಭವ ಪರಿಗಣಿಸುವಾಗ ಸೇವೆಯಲ್ಲಿ Break In Service ಮೂಲಕ ಸೇವೆ ಸಲ್ಲಿಸಿದ ಆಯಾ ಶೈಕ್ಷಣಿಕ ವರ್ಷದ ಅವಧಿಯಲ್ಲಿ ಪೂರ್ಣಾವಧಿಗೆ ತಾತ್ಕಾಲಿಕ ಅತಿಥಿ** |

ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿದ ಅವಧಿಯನ್ನು ವರ್ಷವೆಂದು ಕೇವಲ ಗೌರವ ಧನ ಹೆಚ್ಚಿಸಲು ಪರಿಗಣಿಸಿದೆ.

| ಕ್ರ ಸಂ | ವಿದ್ಯಾರ್ಹತೆ | ಸೇವಾ ಅನುಭವ (Break in Service ಒಳಗೊಂಡಂತೆ) | ಪೂರ್ಣ ಕಾಲಿಕ | | ಅರೆ ಕಾಲಿಕ | |
|---|---|---|---|---|---|---|
| | | | ಪ್ರಸ್ತುತ ನೀಡಲಾಗುತ್ತಿರುವ ಸಂಭಾವನೆ | ಪರಿಷ್ಕೃತ ವೇತನ | ಪ್ರಸ್ತುತ ನೀಡಲಾಗುತ್ತಿರುವ ಸಂಭಾವನೆ | ಪರಿಷ್ಕೃತ ವೇತನ |
| 01 | ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ. | ಕನಿಷ್ಠ 10 ವರ್ಷ ಅಥವಾ ಮೇಲ್ಪಟ್ಟು ಸೇವೆ ಸಲ್ಲಿಸಿದವರಿಗೆ | 34,000/- | 38,000/- | 17,000/- | 19,000/- |
| 02 | ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿರುವವರಿಗೆ. | ಕನಿಷ್ಠ 5 ದಿಂದ ಮೇಲ್ಪಟ್ಟ ಮತ್ತು 10 ವರ್ಷಕ್ಕಿಂತ ಕಡಿಮೆ ಸೇವೆ ಸಲ್ಲಿಸಿದವರಿಗೆ | 32,000/- | 34,000/- | 16,000/- | 17,000/- |
| 03 | ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ | ಕನಿಷ್ಠ 5 ವರ್ಷಕ್ಕಿಂತ ಕಡಿಮೆ | 30,000/- | 31,000/- | 15,000/- | 15,500/- |
| 04 | ಯು.ಜಿ.ಸಿ ನಿಗದಿಪಡಿಸಿದ ವಿದ್ಯಾರ್ಹತೆ ಹೊಂದಿಲ್ಲದವರಿಗೆ | ಕನಿಷ್ಠ 3 ವರ್ಷಕ್ಕಿಂತ ಕಡಿಮೆ | 28,000/- | 28,500/- | 14,000/- | 14,250/- |

11 | 2025/08/11 | ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯ ಮೂಲ ಸೌಕರ್ಯ, ಪ್ರಾಚಾರ್ಯರು ಮತ್ತು ಅತಿಥಿ ಉಪನ್ಯಾಸಕರ ಕಾರ್ಯ ವೈಖರಿ ಕುರಿತಾಗಿ ಪರಿಶೀಲನೆ ನಡೆಸಿ ವರದಿಯನ್ನು ಸಲ್ಲಿಸಲು

ತೀರ್ಮಾನ

ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿಯ ಕುರಿತಾಗಿ ವಾಸ್ತವತೆ(Ground Reality) ಪರಿಶೀಲಿಸಲು ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ಇವರ ಅಧ್ಯಕ್ಷತೆಯಲ್ಲಿ ಉಪಸಮಿತಿಯನ್ನು ರಚಿಸಲಾಗಿತ್ತು. ಸದರಿ ಉಪಸಮಿತಿಯು ಘಟಕ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಮೂಲ ಸೌಕರ್ಯ, ಪ್ರಾಚಾರ್ಯರು ಮತ್ತು ಅತಿಥಿ ಉಪನ್ಯಾಸಕರು, ಬೋಧಕೇತರ ಸಿಬ್ಬಂದಿಗಳ ಕಾರ್ಯ ವೈಖರಿ ಕುರಿತಾಗಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ನು ಹಾಗೂ ಸದರಿ ವರದಿಗೆ ಮಹಾವಿದ್ಯಾಲಯದ ಪ್ರಾಚಾರ್ಯರು ನೀಡಿದ ಉತ್ತರವನ್ನು ಸಭೆಗೆ ಮಂಡಿಸಲಾಯಿತು. ಘಟಕ ಮಹಾವಿದ್ಯಾಲಯದ ಪ್ರಾಚಾರ್ಯರಾದ ಪ್ರೊ. ಎಂ.ಜಿ. ಹೆಗಡೆ ಇವರು Whatsapp ಮೂಲಕ ರಾಜೀನಾಮೆಯನ್ನು ನೀಡಿರುವ ವಿಷಯವನ್ನು ಸಭೆಯ ಗಮನಕ್ಕೆ ತರಲಾಯಿತು.

1. ಶ್ರೀ ಮಹಾಂತೇಶ ಕಂಬಾರ:

ಪ್ರಾಚಾರ್ಯರು ನೀಡಿರುವ ರಾಜೀನಾಮೆಯನ್ನು ಗೌರವಯುತವಾಗಿ ಸ್ವೀಕರಿಸುವುದು. ಅಲ್ಲಿರುವ ಹಿರಿಯ ಪ್ರಾಧ್ಯಾಪಕರನ್ನು ಪ್ರಾಂಶುಪಾಲರಾಗಿ ನೇಮಿಸುವುದು. ಇದರಿಂದ ಪಾಚಾರ್ಯರಿಗೆ ಪ್ರತಿ ತಿಂಗಳು ನೀಡಲಾಗುವ ವೇತನ ರೂ. **1,20,000/-** ಗಳು ವಿಶ್ವವಿದ್ಯಾಲಯಕ್ಕೆ ಉಳಿತಾಯವಾಗುವುದು.

2. ಡಾ. ಮಾರುತಿ ಮುಂಡರಗಿ:

ಕಳೆದ **3** ಮತ್ತು **4** ವರ್ಷಗಳ ಹಿಂದೆ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯವು ಅತ್ಯಂತ ಕೆಟ್ಟ ಅವಸ್ಥೆಯಲ್ಲಿ ಇರುತ್ತದೆ. ಪ್ರೊ. ಎಂ.ಜಿ. ಹೆಗಡೆ ಇವರನ್ನು ಪ್ರಾಚಾರ್ಯರಾಗಿ ನೇಮಕಗೊಂಡ ನಂತರ ಶೈಕ್ಷಣಿಕವಾಗಿ ಸಾಕಷ್ಟು ಸುಧಾರಣೆಯಾಗಿರುತ್ತದೆ. ಕಾರಣ, ಚಾಲ್ತಿಯಲ್ಲಿರುವ ಸೆಮೆಸ್ಟರ್ ಪೂರ್ಣಗೊಳ್ಳುವವರೆಗೆ ಸದರಿಯವರನ್ನು ಮುಂದುವರೆಸುವುದು.

3. ಡಾ. ಎಸ್. ಎಸ್. ಅಂಗಡಿ:

ಪ್ರೊ. ಎಂ.ಜಿ. ಹೆಗಡೆ ಇವರಿಗೆ ಅಗಾಧವಾದ ಜ್ಞಾನವಿರುವುದರಿಂದ ಅವರ ಮೇಲೆ ಅಪಾರ ಗೌರವವಿರುತ್ತದೆ. ಕಾರಣ, ಒಂದು ಸೆಮೆಸ್ಟರ್ ಮುಂದುವರೆಸುವುದು.

4. ಶ್ರೀ. ಎಸ್. ಎ. ದೇಶಮುಖ್:

ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಪ್ರಾಚಾರ್ಯರನ್ನು ಬದಲಾಯಿಸುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಕಲಿಕೆಗೆ ತೊಂದರೆಯಾಗುತ್ತದೆ. ಸದರಿಯವರ ಮೇಲೆ ಆರೋಪಗಳು ಕೇಳಿ ಬಂದಿದ್ದು ಸುಧಾರಣೆಗೆ ಕಾಲಾವಕಾಶ ನೀಡುವುದು ಮತ್ತು ಒಂದು ಸೆಮೆಸ್ಟರ್ ಮುಂದುವರೆಸುವುದು.

5. ಶ್ರೀ ಜಗದೀಶ ಜೋಡಂಗಿ:

ಒಂದು ಸೆಮೆಸ್ಟರ್ ಮುಂದುವರೆಸುವುದು.

6. ಶ್ರೀ ಈರಣ್ಣ ಹಪ್ಪಲಿ:

ಪ್ರಾಚಾಯರರ ವಿರುದ್ಧ ಅನೇಕ ದೂರುಗಳು ಬಂದಿದೆ. ಕಾರಣ, ರಾಜೀನಾಮೆ ಒಪ್ಪುವುದು.

7. ಶ್ರೀ ವಿನೀತ್ ಜೋಶಿ:

He is not fit for that post. His approach is not proper.

8. ಪ್ರೊ. ವಿನಾಯಕ ಬಂಕಾಪೂರ:

ಒಂದು ಸೆಮೆಸ್ಟರ್ ಮುಂದುವರೆಸುವುದು.

9. ಪ್ರೊ. ವ್ಹಿ. ಎಸ್. ಶಿಗೇಹಳ್ಳಿ:

ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಪ್ರಾಚಾರ್ಯರನ್ನು ಬದಲಾಯಿಸುವುದು ಬೇಡ. ಒಂದು ಸೆಮೆಸ್ಟರ್ ಪೂರ್ಣಗೊಂಡ ನಂತರ ಕ್ರಮ ವಹಿಸುವುದು.

10. ಶ್ರೀಮತಿ ಎಸ್. ಬಿ. ಢಂಗ:

ನನ್ನನ್ನು ಪ್ರಾಚಾರ್ಯರ ಹುದ್ದೆಯಿಂದ ಯಾರೂ ತೆಗೆಯಲೂ ಸಾಧ್ಯವಿಲ್ಲ ಎನ್ನುವ ಭಾವನೆ ಅವರಲ್ಲಿ ಮೂಡಬಾರದು. ಕಾರಣ, ಅವರು ನೀಡಿರುವ ರಾಜೀನಾಮೆಯನ್ನು ಸ್ವೀಕರಿಸುವುದು. ಆದರೆ, ಚಾಲ್ತಿಯಲ್ಲಿರುವ ಸೆಮೆಸ್ಟರ್ ಪೂರ್ಣಗೊಂಡ ನಂತರ ಸದರಿಯವರನ್ನು ಬಿಡುಗಡೆಗೊಳಿಸುವುದು.

11. ಡಾ. ಕಾವೇರಿ. ಎಚ್. ಎಂ :

ಪ್ರಾಚಾರ್ಯರಾದ ಪ್ರೊ. ಎಂ. ಜಿ. ಹೆಗಡೆ ಇವರು ಅಗಾಧವಾದ ಜ್ಞಾನವನ್ನು ಹೊಂದಿದ್ದು, ಈ ಬಗ್ಗೆ ತಮಗೆ ಅಪಾರ ಗೌರವ ಮತ್ತು ಹೆಮ್ಮೆ ಇದೆ. ಸದರಿಯವರು Non-Curruptive ವ್ಯಕ್ತಿಯಾಗಿದ್ದು, ಅತ್ಯಂತ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗಿರುವ ಜ್ಞಾನವನ್ನು ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಬಳಕೆಯಾಗುವುದರ ಬದಲಾಗಿ ಬೇರೆ ಕಾರ್ಯಗಳಿಗೆ ಬಳಕೆಯಾಗುತ್ತಿದೆ. ಮುಂದುವರೆದು ಅವರ ವಯಸ್ಸಿನ ಕಾರಣದಿಂದಾಗಿ ಕೆಲಸದ ಸಾಮರ್ಥ್ಯ ಕಡಿಮೆಯಾಗಿರುತ್ತದೆ. ಕಾರಣ, ಸದರಿಯವರನ್ನು ಗೌರವದಿಂದ ಕಳುಹಿಸುವುದು ಸೂಕ್ತ.

12. ಶ್ರೀ ರವೀಂದ್ರ ನಾಯ್ಕರ:

ವಿಶ್ವವಿದ್ಯಾಲಯದ ಅರ್ಹ ಹಿರಿಯ ಬೋಧಕ ಸಿಬ್ಬಂದಿಗೆ ಪ್ರಾಚಾರ್ಯರಾಗಿ ನೇಮಕ ಮಾಡುವುದು.

13. ಶ್ರೀ ರಫೀ ಭಂಡಾರಿ:

ಅವರ ವಯಸ್ಸು ಕೆಲಸ ಮಾಡಲು ಸಹಕರಿಸುವುದಿಲ್ಲ. ಕಾರಣ, ರಾಜೀನಾಮೆ ಸ್ವೀಕರಿಸುವುದು.

ಪ್ರತಿಕ್ರಿಯಿಸಿದ ಕುಲಪತಿಗಳು, ಪ್ರೊ. ಎಂ. ಜಿ. ಹೆಗಡೆ ಇವರು ಪ್ರಾಚಾರ್ಯರಾಗಿ ನೇಮಕಗೊಂಡ ನಂತರದಲ್ಲಿ ಘಟಕ ಮಹಾವಿದ್ಯಾಲಯದಲ್ಲಿ 75% ಹಾಜರಾತಿ ನೀತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವುದು, ಸಮ್ಮೇಳನ ಸೆಮಿನಾರ್, ಬೃಹತ್ ಉದ್ಯೋಗ ಮೇಳಗಳನ್ನು ಆಯೋಜಿಸಿರುವುದು, ಮೆರಿಟ್ ಆಧಾರದ ಮೇಲೆ ಪ್ರವೇಶಾತಿ, ಆಂತರಿಕ ಅಂಕಗಳನ್ನು ನೀಡುವ ಕ್ರಮದಲ್ಲಿ ಪಾರದರ್ಶಕತೆ ಹೀಗೆ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು ಮಹಾವಿದ್ಯಾಲಯವು ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಬೆಳವಣಿಗೆ ಕಂಡಿದೆ.

| | | |
|---|---|---|
| | | ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸರ್ವಾಂಗೀಣ ಅಭಿವೃದ್ಧಿಗೆ ಸದರಿಯವರ ಶ್ರಮವನ್ನು ಮಾನ್ಯ ಕುಲಪತಿಗಳು ಸ್ಮರಿಸಿದರು.<br>ಸುದೀರ್ಘವಾಗಿ ಚರ್ಚಿಸಿ, ಸದಸ್ಯರುಗಳ ಅಭಿಪ್ರಾಯದಂತೆ, ಪ್ರೊ. ಎಂ. ಜಿ. ಹೆಗಡೆ ಇವರು ನೀಡಿರುವ ರಾಜೀನಾಮೆಯನ್ನು ಸ್ವೀಕರಿಸಿ ದಿನಾಂಕ: **31.08.2025** ರಂದು ಕಛೇರಿ ಸಮಯದ ನಂತರ ಸದರಿಯವರನ್ನು ಪ್ರಾಚಾರ್ಯರರ ಹುದ್ದೆಯಿಂದ ಗೌರವಪೂರ್ವಕವಾಗಿ ಬಿಡುಗಡೆಗೊಳಿಸಲು ಸಭೆಯು ತೀರ್ಮಾನಿಸಿತು. ಮುಂದುವರೆದು, ಅರ್ಹ ಅಭ್ಯರ್ಥಿಯನ್ನು ತೆರವಾದ ಸ್ಥಾನಕ್ಕೆ ನಿಯೋಜಿಸಲು ಸಭೆಯು ಅನುಮೋದನೆ ನೀಡಿತು. |
| 12 | 2025/08/12 | 2025–26 ರ ಜೂನ್–ಜುಲೈನಲ್ಲಿ ಜರುಗಿದ ಪರೀಕ್ಷೆಗೆಗಳ MPLEC ನಕಲು ಪ್ರಕರಣಗಳಲ್ಲಿ ಭಾಗಿಯಾದ ವಿದ್ಯಾರ್ಥಿಗಳ ವಿಚಾರಣಾ ಪ್ರಕ್ರಿಯೆ ಕೈಗೊಳ್ಳಲು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸುವ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ **2025–26** ರ ಜೂನ–ಜುಲೈನಲ್ಲಿ ಬೆಳಗಾವಿ, ವಿಜಯಪುರ ಮತ್ತು ಬಾಗಲಕೋಟ ಜಿಲ್ಲೆಗಳಲ್ಲಿ **2, 4** ಮತ್ತು **6**ನೇ ಸ್ನಾತಕ ಮತ್ತು ಸ್ನಾತಕೋತ್ತರ ಸೆಮಿಸ್ಟರ್ ಪರೀಕ್ಷೆಗಳು ಜರುಗಿದ್ದು, ಸದರಿ ಪರೀಕ್ಷೆಗಳಲ್ಲಿ ನಕಲು ಆರೋಪ ಹೊಂದಿರುವ ವಿದ್ಯಾರ್ಥಿಗಳ ವಿಚಾರಣಾ ಪ್ರಕ್ರಿಯೆ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 13 | 2025/08/13 | 14 ನೇ ವಾರ್ಷಿಕ ಘಟಿಕೋತ್ಸವದ ಪೂರ್ವ ತಯಾರಿಗಾಗಿ ವಿವಿಧ ಕಾರ್ಯಗಳನ್ನು ನಿಯಮಾವಳಿ ಅನುಸರಿಸಿ ಕ್ರಮ ಕೈಗೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದ ಕುರಿತು. |
| ತೀರ್ಮಾನ | | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **14** ನೇ ವಾರ್ಷಿಕ ಘಟಿಕೋತ್ಸವದ ಪೂರ್ವ ಸಿದ್ಧತೆ ತಯಾರಿಗಾಗಿ ಈ ಕೆಳಕಾಣಿಸಿದ ಕಾರ್ಯಗಳನ್ನು ನಿಯಮಾನುಸಾರ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.<br>1. ಘಟಿಕೋತ್ಸವದ ಮುಖ್ಯ ಅತಿಥಿಗಳ ಹೆಸರುಗಳನ್ನು ನಾಮನಿರ್ದೇಶನ ಮಾಡುವುದು.<br>2. ವಸ್ತ್ರ ಸಂಹಿತೆ(Dress code)<br>3. ಸುವರ್ಣ ಪದಕ<br>4. ಅರ್ಹತಾ ಪುಸ್ತಕ, ಆಮಂತ್ರಣ ಪತ್ರಿಕೆ ಮತ್ತು ಇತರೆ ಮುದ್ರಣಗಳು<br>5. ಊಟ–ಉಪಹಾರ<br>6. ಶಾಮಿಯಾನ ವ್ಯವಸ್ಥೆ<br>7. ದೀಪಾಲಂಕಾರ<br>8. ಪೋಟೊಗ್ರಾಫಿ ಮತ್ತು ವಿಡಿಯೋಗ್ರಾಫಿ<br>ಇನ್ನಿತರೆ ಕಾರ್ಯಗಳು<br>ಮುಂದುವರೆದು, **2024–25** ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಏಪ್ರಿಲ್–ಮೇ2025 ರಲ್ಲಿ ಪರೀಕ್ಷೆ ನಡೆಸಿ, ಫಲಿಂತಾಶ ಪ್ರಕಟಿಸಿ, **03** ತಿಂಗಳ(ನವೆಂಬರ್–**2025**) ಒಳಗಾಗಿ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವ ಕಾರ್ಯಕ್ರಮದಲ್ಲಿ ನೀಡುವ ರಾಜ್ಯದ ಮೊದಲ ವಿಶ್ವವಿದ್ಯಾಲಯವಾಗಲಿದೆ. ಪ್ರತಿಷ್ಠಿತ ಘಟಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅಥಿತಿಯಾಗಿ ಗಣ್ಯರನ್ನು ಆಹ್ವಾನಿಸುವ ವಿಷಯವನ್ನು ಮಾನ್ಯ ಕುಲಪತಿಗಳು ಪ್ರಸ್ತಾಪಿಸಿದರು ಹಾಗೂ ಮೀರಾ ಕುಮಾರ್ ಇವರು ಹಿರಿಯ ರಾಜಕಾರಣಿ, ವಕೀಲೆ ಮತ್ತು ಹಲವು ಬಾರಿ ಸಂಸತ್ ಸದಸ್ಯರಾಗಿದ್ದರು. ಭಾರತೀಯ ಲೋಕಸಭೆಯ ಮೊದಲ ಮಹಿಳಾ ಸ್ಪೀಕರ್ ಆಗಿ **2009** ರಿಂದ **2014** ರವರೆಗೆ ಕಾರ್ಯನಿರ್ವಹಿಸಿರುತ್ತಾರೆ ಹಾಗೂ ಶ್ರೀ. ಶಶಿ ತರೂರ್, ಹಿರಿಯ ರಾಜಕಾರಣಿ, ಲೇಖಕ ಮತ್ತು ಮಾಜಿ ರಾಜತಾಂತ್ರಿಕರು ಇವರುಗಳನ್ನು ವಿಶ್ವವಿದ್ಯಾಲಯದ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಆಹ್ವಾನಿಸಲು ಪ್ರಯತ್ನಿಸಲಾಗುತ್ತಿದೆ ಎಂದರು. |

| | | |
|---|---|---|
| | | ಶ್ರೀ ಮಹಾಂತೇಶ ಕಂಬಾರ:<br>ಭಾರತದ ಉನ್ನತ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಕ್ಷೇತ್ರದಲ್ಲಿ ಹೆಸರು ಮಾಡಿರುವ ಪ್ರೊ. ಸುಖದೇವ ಥೋರಟ್ ಇವರ ಹೆಸರನ್ನು ನಾಮನಿರ್ದೇಶಿಸಿದರು. ಸದರಿಯವರು ಯುಜಿಸಿ ಅಧ್ಯಕ್ಷರು ಆಗಿದ್ದರು(2006–2011) ಮತ್ತು ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ Social Exclusion and Inclusive Policy Studies Centres (ಸಾಮಾಜಿಕ ಹೊರತಾಗುವಿಕೆ ಮತ್ತು ಒಳಗೊಂಡಿಕೆ ನೀತಿ ಅಧ್ಯಯನ ಕೇಂದ್ರ) ಸ್ಥಾಪಿಸಲು ಮಹತ್ವದ ಪಾತ್ರವಹಿಸಿರುತ್ತಾರೆ ಎಂದರು.<br>ಶ್ರೀ ರಫೀ ಭಂಢಾರಿ:<br>ಶ್ರೀ. ಶಾಹಬುದ್ದೀನ್ ಯಾಕೂಬ್ ಕುರೇಶಿ, ಮುಖ್ಯ ಚುನಾವಣಾ ಆಯುಕ್ತರಾಗಿ ಕಾರ್ಯನಿರ್ವಹಿಸಿರುತ್ತಾರೆ. ಇವರ ಹೆಸರನ್ನು ಶಿಫಾರಸ್ಸು ಮಾಡಿದರು.<br>ಡಾ. ಕಾವೇರಿ.ಎಚ್.ಎಂ:<br>ಕನ್ನಡ ವಿಶ್ವವಿದ್ಯಾಲಯ, ಹಂಪಿ ಇಲ್ಲಿ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ ಡಾ. ಹಿ. ಚಿ. ಬೋರಲಿಂಗಯ್ಯ ಇವರ ಹೆಸರನ್ನು ಘಟಿಕೋತ್ಸವ “ಅರ್ಜಿ ಪರಿಶೀಲನಾ ಸಮಿತಿ”ಗೆ ಆಯ್ಕೆ ಮಾಡಲು ತಿಳಿಸಿದರು.<br>**ಚರ್ಚಿಸಿದ ಸಭೆಯು, 1. ಪ್ರೊ. ಸುಖದೇವ ಥೋರಟ್ 2. ಮೀರಾ ಕುಮಾರ್ 3. ಶ್ರೀ. ಶಶಿ ತರೂರ್ 4. ಶಾಹಬುದ್ದೀನ್ ಯಾಕೂಬ್ ಕುರೇಶಿ, ಇವರುಗಳನ್ನು ಕ್ರಮ ಸಂಖ್ಯೆಯಲ್ಲಿ ಸೂಚಿಸಿದ ಹೆಸರನ್ನು ಆದ್ಯತೆ ಮೇರೆಗೆ ಮುಖ್ಯ ಅತಿಥಿಯಾಗಿ ಆಹ್ವಾನಿಸಲು ಮತ್ತು ಡಾ. ಹಿ. ಚಿ. ಬೋರಲಿಂಗಯ್ಯ, ನಿವೃತ್ತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರನ್ನು ಪರಿಶೀಲನಾ ಸಮಿತಿಗೆ ಸದಸ್ಯರಾಗಿ ಶಿಫಾರಸ್ಸು ಮಾಡಲು ಸಭೆಯು ತೀರ್ಮಾನಿಸಿತು.**<br>**ಮುಂದುವರೆದು, ಗೌರವ ಡಾಕ್ಟರೇಟ್ ಪ್ರಶಸ್ತಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಗಣ್ಯರ ಹೆಸರುಗಳನ್ನು ಸಂಕ್ಷಿಪ್ತ ವಿವರಣೆಯೊಂದಿಗೆ ಕುಲಸಚಿವರು(ಮೌ) ಕಾರ್ಯಾಲಯಕ್ಕೆ ಸಲ್ಲಿಸಲು ತಿಳಿಸಲಾಯಿತು.** |
| 14 | 2025/08/14 | ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಿಗಾಗಿ ಅವಶ್ಯವಿರುವ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಪೂರೈಸಿಕೊಳ್ಳಲು ಸಭೆಯ ಅನುಮೋದನೆಗೆ ಮಂಡಿಸಿದ ಕುರಿತು. |
| ತೀರ್ಮಾನ | | **ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ಪರೀಕ್ಷೆಗಳಿಗಾಗಿ 36 ಪುಟಗಳ, 32 ಪುಟಗಳ ಹಾಗೂ 04 ಪುಟಗಳ ಉತ್ತರ ಪತ್ರಿಕೆಗಳಿಗಾಗಿ ಮಾಡಿಕೊಂಡಿದ್ದ ಒಪ್ಪಂದವು ಮುಕ್ತಾಯಗೊಂಡಿರುತ್ತದೆ. 2025–26ನೇ ಸಾಲಿಗೆ ಜರುಗಲಿರುವ ಪರೀಕ್ಷೆಗಳಿಗೆ 32, 36 ಪುಟಗಳ ಲಿಖೀತ ಪರೀಕ್ಷೆಯ ಉತ್ತರ ಪತ್ರಿಕೆಗಳು ಹಾಗೂ 04 ಪುಟಗಳ ಪ್ರಾಯೋಗಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಪೂರೈಸಿಕೊಳ್ಳಲು 4(ಜಿ) ವಿನಾಯತಿ ಇದ್ದರೂ ಕುಲಸಚಿವರು(ಮೌ) ಕೋರಿಕೆ ಮೇರೆಗೆ ಟೆಂಡರ್ ಆಹ್ವಾನಿಸಲು ಮುಖಾಂತರ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು.** |
| 15 | 2025/08/15 | 2025–26ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಸ್ವಾಯತ್ತ(Autonomous) ಮಹಾವಿದ್ಯಾಲಯಗಳ ಶುಲ್ಕಗಳನ್ನು ಪರಿಷ್ಕರಿಸಲು ಅನುಸಮರ್ಥನೆ ನೀಡುವ ಕುರಿತು. |
| ತೀರ್ಮಾನ | | **2025–26ನೇ ಶೈಕ್ಷಣಿಕ ಸಾಲಿನಿಂದ, ಸ್ವಾಯತ್ತ(Autonomous) ಮಹಾವಿದ್ಯಾಲಯಗಳಲ್ಲಿನ ಕಲಾ ನಿಖಾಯದ ಕೋರ್ಸ್‌ಗಳಿಗೆ ಶೇ. 10 ರಷ್ಟು, ವಾಣಿಜ್ಯ ನಿಖಾಯದ ಕೋರ್ಸ್‌ಗಳಿಗೆ ಶೇ. 50 ರಷ್ಟು ಮತ್ತು ವಿಜ್ಞಾನ ನಿಖಾಯದ ಕೋರ್ಸ್‌ಗಳಿಗೆ ಶೇ. 20 ರಷ್ಟಯ ಹಾಗೂ ಎಂ.ಬಿ.ಎ. ಕೋರ್ಸಿಗೆ ಮ್ಯಾಚಿಂಗ್ ಶುಲ್ಕವಾಗಿ ಹೆಚ್ಚುವರಿಯಾಗಿ ರೂ. 12,000/– ಮತ್ತು ಎಂ.ಸಿ.ಎ. ಕೋರ್ಸಿಗೆ ರೂ. 10,000/–ಗಳ ಶುಲ್ಕಗಳನ್ನು ಹೆಚ್ಚಿಸಿ ಆಕರಣೆ ಮಾಡುವ ಕುರಿತು ಸಭೆಯು ಅನುಸಮರ್ಥನೆ ನೀಡಿತು.** |
| 16 | 2025/08/16 | ಬಿ.ಇಡಿ. ಪ್ರವೇಶಾತಿ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಶುಲ್ಕವನ್ನು ಪಡೆಯುತ್ತಿದ್ದಾರೆ ಎಂದು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು/ಸಂಘಟನೆಗಳು ವಿಶ್ವವಿದ್ಯಾಲಯಕ್ಕೆ ದೂರು ನೀಡಿರುವ ಕುರಿತಂತೆ ಸಮಿತಿ ನೀಡಿರುವ ವರದಿ ಬಗ್ಗೆ |

| | | |
|---|---|---|
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ವಿಜಯಪುರ ಜಿಲ್ಲೆಯ ಶ್ರೀಮತಿ ಮೀನಾಕ್ಷಿ ಆರ್. ಕಲ್ಲೂರ, ವಿದ್ಯಾವರ್ಧಕ ಸಂಘ (ಬಿ.ಎಡ್.ಮಹಾವಿದ್ಯಾಲಯ), ವಿಜಯಪುರ ಹಾಗೂ ಕುಮಾರಿ ಮೋನಿಕಾ ಬಸವರಾಜ ಕನ್ನಿ ಬಿ.ಎಡ್. ಮಹಾವಿದ್ಯಾಲಯ, ಅಥಣಿ ರಸ್ತೆ, ವಿಜಯಪುರ ಈ ಮಹಾವಿದ್ಯಾಲಯಗಳಲ್ಲಿ ಪ್ರವೇಶಾತಿ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚುವರಿ ಶುಲ್ಕವನ್ನು ಪಡೆಯುತ್ತಿದ್ದಾರೆ ಎಂದು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು/ಸಂಘಟನೆಗಳು ವಿಶ್ವವಿದ್ಯಾಲಯಕ್ಕೆ ದೂರು ನೀಡಿದ್ದರು. ಸದಸ್ಯರಾದ ಶ್ರೀ ರಫೀ ಭಂಡಾರಿ ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಮಿತಿಯು ಈ ವಿಷಯಕ್ಕೆ ಸಂಬಂಧಿಸಿ ಪರಿಶೀಲಿಸಿ ಸಲ್ಲಿಸಿದ ವರದಿಯನ್ವಯ ದಿನಾಂಕ: **08.07.2025** ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಈ ಎರಡು ಮಹಾವಿದ್ಯಾಲಯಗಳಿಗೆ **2025-26** ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿಗೆ ಅವಕಾಶ ಕಲ್ಪಿಸದೇ **03** ವರ್ಷ ಅವಧಿಗೆ ಅಮಾನತ್ತಿನಲ್ಲಿಡಲು ಹಾಗೂ **30** ಲಕ್ಷ ದಂಡ ವಿಧಿಸಲು ತೀರ್ಮಾನಿಸಲಾಗಿದೆ. ಈ ವಿಷಯವನ್ನು ದಿನಾಂಕ: **08.08.2025** ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ಮಂಡಿಸಲಾಯಿತು. ಸದರಿ ಸಭೆಯ ಸದಸ್ಯರು ಎರಡು ಮಹಾವಿದ್ಯಾಲಯಗಳಿಗೆ ಒಂದೇ ರೀತಿ ಶಿಕ್ಷೆ ವಿಧಿಸಿರುವುದು ಮತ್ತು ದಂಡ ವಿಧಿಸಿರುವುದರಿಂದ ಮಹಾವಿದ್ಯಾಲಯದವರು ಪರೋಕ್ಷವಾಗಿ ವಿದ್ಯಾರ್ಥಿಗಳಿಂದ ವಸೂಲಾತಿ ಮಾಡುವ ಸಂಭವವಿರುತ್ತದೆ ಹಾಗೂ ಕೋರ್ಸಗಳ ನಡುವಿನ ಸ್ಪರ್ಧಾತ್ಮಕತೆ(Competation) ವೈಯಕ್ತಿಕ ದ್ವೇಷದಿಂದಾಗಿ ದೂರು ನೀಡಿರಬಹುದು ಎಂದು ವಿದ್ಯಾವಿಷಯಕ್ ಪರಿಷತ್ತಿನ ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿರುವ ವಿಷಯವನ್ನು ಕುಲಸಚಿವರು ಸಭೆಗೆ ನೀಡಿದರು. ಮುಂದುವರೆದು, ಕುಮಾರಿ ಮೋನಿಕಾ ಬಸವರಾಜ ಕನ್ನಿ ಬಿ.ಎಡ್. ಮಹಾವಿದ್ಯಾಲಯ, ಅಥಣಿ ರಸ್ತೆ, ವಿಜಯಪುರ ಇವರು NCTE ಯಿಂದ ಅನುಮೋದನೆ ಪತ್ರವನ್ನು ಕೂಡ ಸಲ್ಲಿಸಿರುತ್ತಾರೆ ಎಂದರು.<br>ಶ್ರೀ ರಫೀ ಭಂಡಾರಿ:<br>ಸದರಿ ಮಹಾವಿದ್ಯಾಲಯವು ಬಿ.ಎಡ್. ಕೋರ್ಸ್‌ನ ಮಹಾವಿದ್ಯಾಲಯವಾಗಿದ್ದು, ಅಲ್ಲಿ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಶಿಕ್ಷಕ ಹುದ್ದೆಗೆ ನೇಮಕಗೊಳ್ಳುವರು. ಮೂಲ ಸೌಕರ್ಯ ಕೊರತೆ ಮತ್ತು ತರಗತಿಗಳನ್ನು ನಡೆಸುವಲ್ಲಿ ಗುಣಾತ್ಮಕತೆ ಇಲ್ಲದೇ ಇರುವುದರಿಂದ ಕಠಿಣ ಕ್ರಮ ತೆಗೆದುಕೊಳ್ಳುವುದು ಅವಶ್ಯವಿರುತ್ತದೆ. ನ್ಯಾಯಾಲಯದಲ್ಲಿ Caveat ಕೂಡ ದಾಖಲಿಸಲು ತಿಳಿಸಿದರು.<br>ಚರ್ಚಿಸಿದ ಸಭೆಯು, ಎರಡು ಮಹಾವಿದ್ಯಾಲಯಗಳಿಗೆ ನೈಸರ್ಗಿಕ ನ್ಯಾಯ ನೀಡುವುದು ಅವಶ್ಯವಿರುವುದರಿಂದ ಸದರಿ ಮಹಾವಿದ್ಯಾಲಯಗಳಿಗೆ **2025-26** ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿಗೆ ಅವಕಾಶ ಕಲ್ಪಿಸದೇ **03** ವರ್ಷ ಅವಧಿಗೆ ಏಕೆ ಅಮಾನತ್ತಿನಲ್ಲಿಡಬಾರದು ಹಾಗೂ **30** ಲಕ್ಷ ದಂಡ ಏಕೆ ವಿಧಿಸಬಾರದು ಎಂದು ಶಿಸ್ತು ಕ್ರಮ ಏಕೆ ಜರುಗಿಸಬಾರದೆಂದು ಕಾರಣ ಕೇಳಿ ನೋಟಿಸ್ ಜಾರಿ ಮಾಡಲು ಸಭೆಯು ತೀರ್ಮಾನಿಸಿತು. |
| 17 | 2025/08/17 | ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳ ಪ್ರಥಮ ವರ್ಷಕ್ಕೆ ಮಾತ್ರ ವಿದ್ಯಾರ್ಥಿಗಳಿಂದ ಗುರುತಿನ ಚೀಟಿಯ ಶುಲ್ಕ ಆಕರಿಸಿ, ಶುಲ್ಕ ರಚನೆಯಲ್ಲಿ ಬದಲಾವಣೆ ಮಾಡುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಂಯೋಜಿತ ಸ್ನಾತಕ ಹಾಗೂ ಸ್ನಾತಕೋತ್ತರ ಮಹಾವಿದ್ಯಾಲಯಗಳು, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ ಹಾಗೂ ಮುಖ್ಯ ಆವರಣ ರಾಚವಿ.ಯ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳ ಶುಲ್ಕದಲ್ಲಿ ಗುರುತಿನ ಚೀಟಿ **(Identity Card Fee)** ಶುಲ್ಕವನ್ನು ಪ್ರಥಮ ವರ್ಷಕ್ಕೆ ಮಾತ್ರ ತೆಗೆದುಕೊಳ್ಳಬೇಕಾಗಿರುತ್ತದೆ.<br>ಸ್ನಾತಕ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಹಾಗೂ ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯದ **2025-26** ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸುಗಳ **1,3,5** ನೇ ಸೆಮಿಸ್ಟರ್‌ನ ಶುಲ್ಕದಲ್ಲಿ ಗುರುತಿನ ಚೀಟಿ ಶುಲ್ಕವನ್ನು ಈಗಾಗಲೇ ತೆಗೆದುಕೊಳ್ಳಲಾಗಿದೆ. ಆದಕಾರಣ ಮುಂದಿನ **2026-27** ನೇ ಶೈಕ್ಷಣಿಕ ಸಾಲಿನ ಶುಲ್ಕದಲ್ಲಿ ಪ್ರಥಮ ವರ್ಷಕ್ಕೆ ಮಾತ್ರ ತೆಗೆದುಕೊಳ್ಳುವುದು ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ |

| | | |
|---|---|---|
| | | ಶುಲ್ಕದಲ್ಲಿ 2025-26 ನೇ ಸಾಲಿನಲ್ಲಿ ಪ್ರಥಮ ವರ್ಷದಿಂದ ಗುರುತಿನ ಚೀಟಿ (Identity Card Fee) ಶುಲ್ಕವನ್ನು ತೆಗೆದುಕೊಳ್ಳಲು ಮತ್ತು ದ್ವಿತಿಯ ವರ್ಷದ ಶುಲ್ಕದಲ್ಲಿ ಸದರಿ ಶುಲ್ಕವನ್ನು ತೆಗೆಯಲು ಹಾಗೂ ಸ್ನಾತಕ ಹಾಗೂ ಸ್ನಾತಕೋತ್ತರ ಮಹಾವಿದ್ಯಾಲಯವರು ಗುರುತಿನ ಚೀಟಿ ಶುಲ್ಕವನ್ನು ಪ್ರಥಮ ವರ್ಷಕ್ಕೆ ಮಾತ್ರ ತೆಗೆದುಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 18 | 2025/08/18 | Sports Policy ಗೆ ಅನುಮೋದನೆ ನೀಡುವ ಕುರಿತು. |
| | ತೀರ್ಮಾನ | Sports Policy ಯನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು. |
| 19 | 2025/08/19 | 2011 ರಿಂದ 2025 ರವರೆಗೆ ನೊಂದಣಿ ರದ್ದುಗೊಂಡಿರುವ ಹಾಗೂ ಮಾರ್ಗದರ್ಶಕರ ಬದಲಾವಣೆಗೊಳಪಟ್ಟ ಪಿಎಚ್.ಡಿ. ಸಂಶೋಧನಾರ್ಥಿಗಳ ಕುರಿತು. |
| | ತೀರ್ಮಾನ | ಮುಂದೂಡಲಾಯಿತು |
| 20 | 2025/08/20 | ಡಾ. ಹನುಮಂತಪ್ಪ ಸಂಜೀವಣ್ಣವರ, ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ಇವರ ಪಿಎಚ್.ಡಿ. ಮಾರ್ಗದರ್ಶಕರ ಕರ್ತವ್ಯವನ್ನು ಮರಳಿ ನೀಡುವ ಕುರಿತು. |
| | ತೀರ್ಮಾನ | ದಿನಾಂಕ: 14.06.2024 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಡಾ. ಹನುಮಂತಪ್ಪ ಸಂಜೀವಣ್ಣವರ, ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ ಇವರನ್ನು 5 ವರ್ಷದ ಅವಧಿಗೆ ಪಿಎಚ್.ಡಿ. ಮಾರ್ಗದರ್ಶಕ ಕಾರ್ಯದಿಂದ ಹೊರಗಿಡಲು ತೀರ್ಮಾನಿಸಲಾಗಿತ್ತು. ಮುಂದುವರೆದು, ಸದರಿಯವರು ಮಾರ್ಗದರ್ಶಕ ಕಾರ್ಯದಿಂದ ಹೊರಗಿಟ್ಟ ಕಾರಣದಿಂದಾಗಿ ತಮಗೆ ವೈಯಕ್ತಿಕ ಹಾಗೂ ವೃತ್ತಿ ಬದುಕಿನಲ್ಲಿ ತೀವ್ರ ನಷ್ಟವಾಗುತ್ತಿದ್ದು ನಿರ್ಣಯವನ್ನು ಮರುಪರಿಶೀಲಿಸುವಂತೆ ಕೋರಿರುತ್ತಾರೆ ಹಾಗೂ 2024-25 ನೇ ಶೈಕ್ಷಣಿಕ ಸಾಲಿನಲ್ಲಿ ಸಂಶೋಧನೆ, ಪ್ರಕಟಿತ ಲೇಖನ ಹಾಗೂ ಭಾಗವಹಿಸಿದ ಕಮ್ಮಟಗಳ ವಿವರವನ್ನು ಸಲ್ಲಿಸಿರುವ ವಿಷಯವನ್ನು ಸಭೆಗೆ ಮಂಡಿಸಲಾಯಿತು. ಒಂದು ವರ್ಷದ ಅವಧಿಗೆ ಈ ವಿಷಯವನ್ನು ಮುಂದೂಡಲು ಸಭೆಯು ತೀರ್ಮಾನಿಸಿತು. |
| 21 | 2025/08/21 | 2025-26ನೇ ಸಾಲಿನ ಖರೀದಿ ಸಮಿತಿ ಸಭೆಯ ನಡಾವಳಿಗೆ ಅನುಮೋದನೆ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಂದ ಅವಶ್ಯಕ ಇರುವ ಸಾಮಗ್ರಿಗಳನ್ನು ಖರೀದಿಕೊಡುವಂತೆ ಮನವಿ ಪತ್ರಗಳನ್ನು ಎಸ್ಟೇಟ್ ವಿಭಾಗಕ್ಕೆ ಸಲ್ಲಿಸಿರುತ್ತಾರೆ. ಎಲ್ಲಾ ವಿಭಾಗಗಳ ಬೇಡಿಕೆ ಪಟ್ಟಿಯನ್ನು ಸಿದ್ಧಪಡಿಸಿ ದಿನಾಂಕ: 31.07.2025 ರಂದು ನಡೆದ 2025-26ನೇ ಸಾಲಿನ ಎರಡನೇಯ ಖರೀದಿ ಸಮಿತಿ ಸಭೆಯಲ್ಲಿ ಮಂಡಿಸಲಾಗಿದೆ. ಸದರಿ ಖರೀದಿ ಸಮಿತಿ ಸಭೆಯಲ್ಲಿ ಬೇಡಿಕೆ ಪಟ್ಟಿಯನ್ನು ಪರಿಶೀಲಿಸಲಾಗಿ, ಲಭ್ಯವಿರುವ ಬಜೆಟ್ ಅನುಸಾರ ಖರೀದಿಸಬೇಕಾಗಿರುವುದು ಅವಶ್ಯಕತೆ ಇರುವುದರಿಂದ ಸಾಮಗ್ರಿಗಳ ಪಟ್ಟಿಯನ್ನು ಅಂತಿಮಗೊಳಿಸಲಾಗಿದೆ. ಕಾರಣ, 2025-26ನೇ ಸಾಲಿನ ಎರಡನೇ ಖರೀದಿ ಸಮಿತಿ ಸಭೆಯ ನಡಾವಳಿಗಳಲ್ಲಿ ಅಂತಿಮಗೊಳಿಸಿದ ಪಟ್ಟಿಯಂತೆ ಸಾಮಗ್ರಿಗಳನ್ನು ಖರೀದಿಸಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 22 | 2025/08/22 | Works Committee ಸಭೆಯಲ್ಲಿ ಚರ್ಚಿಸಿದ ವಿಷಯಗಳನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ನೀಡುವ ಕುರಿತು |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಭೂತರಾಮನಹಟ್ಟಿ, ಮುಖ್ಯ ಆವರಣ, ಹಿರೇಬಾಗೇವಾಡಿಯ ನೂತನ ಆವರಣ, ಸಂಗೊಳ್ಳಿ ರಾಯಣ್ಣ ಪ್ರಥಮ ದರ್ಜೆ ಘಟಕ ಮಹಾವಿದ್ಯಾಲಯ, ಬೆಳಗಾವಿ ಹಾಗೂ ಸ್ನಾತಕೋತ್ತರ ಕೇಂದ್ರ, ವಿಜಯಪುರ ಇಲ್ಲಿ ಸಿವಿಲ್ ಕಾಮಗಾರಿಯ ಕಾರ್ಯಗಳನ್ನು ಕೈಗೊಳ್ಳಬೇಕಾಗಿದ್ದು, ಕಾಮಗಾರಿಗಳ ಬಗ್ಗೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 07.08.2025 ರಂದು Works Committee ಸಭೆಯನ್ನು ಆಯೋಜಿಸಲಾಗಿತ್ತು. Works Committee ಯಲ್ಲಿ ಅಂತಿಮಗೊಳಿಸಿದ ಕಾಮಗಾರಿಗಳನ್ನು ಪರಿಶೀಲಿಸಿ ನಿಯಮಾನುಸಾರ ಕೈಗೆತ್ತಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |

| | | | |
|---|---|---|---|
| 23 | 2025/08/23 & 24 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ PM USHA (MERU) ಅಡಿಯಲ್ಲಿನ Construction of Research Center, Adhyana Peeth and School of Languages under PM- USHA (MERU) Scheme at new campus Hirebagewadi, belagavi ಕಟ್ಟಡ ನಿರ್ಮಾಣ ಕಾಮಗಾರಿ ಕುರಿತು. | |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ PM USHA (MERU) ಅಡಿಯಲ್ಲಿನ Construction of Research Center, Adhyana Peeth and School of Languages under PM- USHA (MERU) Scheme at new campus Hirebagewadi, belagavi ಕಟ್ಟಡ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ಸ್ಥಳ ಹಸ್ತಾಂತರಿಸಲು ಹಾಗೂ Research Centre ನ ಕಟ್ಟಡದಲ್ಲಿ ಬದಲಾವಣೆಗಳನ್ನು ಮಾಡಬೇಕಾಗಿದ್ದರಿಂದ ಸಲಹೆ-ಸೂಚನೆ ಪಡೆಯಲು ದಿನಾಂಕ: **31.07.2025** ರಂದು ವಿಶ್ವವಿದ್ಯಾಲಯದ PM USHA (MERU) Scheme Project Monitoring Unit ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. Project Monitoring Unit ಸಮಿತಿಯ ಶಿಫಾರಸ್ಸಿನಂತೆ PM USHA (MERU) ಅಡಿಯಲ್ಲಿನ ಸದರಿ ಕಟ್ಟಡ ನಿರ್ಮಾಣ ಕಾಮಗಾರಿಗೆ ಸ್ಥಳ ಹಸ್ತಾಂತರ ಹಾಗೂ Research Centre ನ ಕಟ್ಟಡದಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ. ಪರಿಶೀಲಿಸಿದ ಸಭೆಯು ಈ ಕೆಳಕಾಣಿಸಿದಂತೆ ಕಾಮಗಾರಿಗಳನ್ನು ಕೈಗೊಳ್ಳಲು ಅನುಸಮರ್ಥನೆ ನೀಡಿತು. | |
| | | ಕ್ರ. ಸಂ | ಕಾಮಗಾರಿಗಳ ಹೆಸರು |
| | | **01** | ಮಾನ್ಯ ಮುಖ್ಯ ಅಭಿಯಂತರರು, ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ, ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರಿಗೆ Construction of Rearch Centre, Adhyana Peeth and School of Languages under PM-USHA (MERU) scheme at new campus Hirebagewadi, Belagavi, ಕಾಮಗಾರಿಯನ್ನು ಕೈಗೊಳ್ಳಲು ಸ್ಥಳ ಹಸ್ತಾಂತರಿಸುವ ಕುರಿತು. |
| | | **02** | Construction of Research centre ಕಾಮಗಾರಿಯ ಕಟ್ಟಡದಲ್ಲಿ ಅಳವಡಿಸಿಕೊಳ್ಳಬೇಕಾಗಿರುವ ಬದಲಾವಣೆಗಳನ್ನು ಅನುಷ್ಠಾನಗೊಳಿಸುವ ಕುರಿತು. |
| 25 | 2025/08/25 | 2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ಅನುಮೋದನೆ ಕುರಿತು. | |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **2025-26**ನೇ ಸಾಲಿನ ಎರಡನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಹಾಗೂ **2024-25**ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿದ್ದು ಈಗಾಗಲೇ ದಿನಾಂಕ: **01.08.2025** ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಸದರಿ ವಾರ್ಷಿಕ ಲೆಕ್ಕಪತ್ರಗಳನ್ನು ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಇಲಾಖೆ ಪ್ರಾಂತೀಯ ಕಛೇರಿ, ಬೆಳಗಾವಿ ಇವರಿಗೆ ಸಲ್ಲಿಸಲು ಸಭೆಯು ಅನುಮೋದನೆ ನೀಡಿತು.<br>**2024-25** ನೇ ಸಾಲಿನ ಲೆಕ್ಕಪತ್ರಗಳನ್ನು Receipt and Payment, Revenue and Expenditure, Balance Sheet ಗಳ ಆರ್ಥಿಕ ತಃಖ್ತೆಗಳಲ್ಲಿ ಟ್ಯಾಲಿ ಮೂಲಕ ತಯಾರಿಸಿ ಹಣಕಾಸು ವಿವರಣೆ ಪಟ್ಟಿಗಳಲ್ಲಿ ಅನುಸರಿಸಲಾದ ಲೆಕ್ಕಪತ್ರ ನೀತಿಗಳು ಮತ್ತು ಮಾಹಿತಿ ನೀಡುವ ಟಿಪ್ಪಣೆಗಳೊಂದಿಗೆ ಹಣಕಾಸು ಅಧಿಕಾರಿಗಳು ಸಭೆಯಲ್ಲಿ ಮಂಡಿಸಿದರು. ಸದರಿ ವಾರ್ಷಿಕ ಲೆಕ್ಕಪತ್ರಗಳನ್ನು ಹಾಗೂ **2025-26** ನೇ ಸಾಲಿನ **2**ನೇಯ ಹಣಕಾಸು ಸಮಿತಿಯ ನಡುವಳಿಯನ್ನು ಸಭೆಯು ಅನುಮೋದಿಸಿತು ಹಾಗೂ ಕುಲಪತಿಗಳು ಸದರಿ ಲೆಕ್ಕಪತ್ರಗಳ ನಿರ್ವಹಣೆಯು ಅತ್ಯುತ್ತಮವಾಗಿ ನಿರ್ವಹಿಸಿರುವ ಕುರಿತು ಹಣಕಾಸು ಸಮಿತಿಯು ಹರ್ಷ ವ್ಯಕ್ತಪಡಿಸಿರುವ ವಿಷಯವನ್ನು ಸಭೆಗೆ ತಿಳಿಸಿದರು. | |
| 26 | 2025/08/26 | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರದ ಸಭೆಗಳನ್ನು ಕಾಗದ ಮುಕ್ತ ಸಭೆಗಳನ್ನಾಗಿ ನಡೆಸಿ, ಸದಸ್ಯರುಗಳಿಗೆ ಟ್ಯಾಬ್(Tab) ನೀಡುವ ಕುರಿತು | |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಪ್ರಾಧಿಕಾರದ ಸಭೆಗಳನ್ನು ಕಾಗದ ಮುಕ್ತ ಸಭೆಗಳನ್ನಾಗಿ ನಡೆಸಿ, ಸದಸ್ಯರುಗಳಿಗೆ ಟ್ಯಾಬ್(Tab) ನೀಡಿ, ಟ್ಯಾಬ್(Tab) ಮುಖಾಂತರ ಸಭೆಗಳನ್ನು ನಡೆಸಲು ಸಭೆಯು ಅನುಮೋದನೆ ನೀಡಿತು. | |

| | | |
|---|---|---|
| 27 | 2025/08/27 | ಮಾನ್ಯ ಸಿಂಡಿಕೇಟ್ ಸದಸ್ಯರು ಪ್ರಸ್ತಾಪಿಸಿರುವ ವಿಷಯಗಳು:<br>ಶ್ರೀ ರಫಿ ಭಂಡಾರಿ:-<br>1. ಸ್ನಾತಕೋತ್ತರ ಕೇಂದ್ರ, ವಿಜಯಪುರದ "Development Committee" ರಚಿಸುವುದು ಹಾಗೂ ಸದರಿ ಸಮಿತಿಯಲ್ಲಿ ಸ್ಥಳೀಯ ಎಂ.ಎಲ್.ಎ., ಮಾನ್ಯ ಜಿಲ್ಲಾಧಿಕಾರಿಗಳು, ಪೋಲೀಸ್ ವರಿಷ್ಠಾಧಿಕಾರಿಗಳು, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸದಸ್ಯರುಗಳನ್ನಾಗಿ ಒಳಪಡಿಸುವ ಕುರಿತಾದ ಪ್ರಸ್ತಾವನೆಗೆ "Development Committee" ಸಮಿತಿ ರಚಿಸಲು ಸಭೆಯು ಅನುಮೋದನೆ ನೀಡಿತು. ಆದರೆ, ಸದರಿ ಸಮಿತಿಯಲ್ಲಿ ಮಾನ್ಯರುಗಳನ್ನು(ಸ್ಥಳೀಯ ಎಂ.ಎಲ್.ಎ., ಮಾನ್ಯ ಜಿಲ್ಲಾಧಿಕಾರಿಗಳು, ಪೋಲೀಸ್ ವರಿಷ್ಠಾಧಿಕಾರಿಗಳು,) ಒಳಪಡಿಸುವ ವಿಷಯಕ್ಕೆ ಮಾನ್ಯರುಗಳನ್ನು ಖುದ್ದಾಗಿ ಭೇಟಿ ಮಾಡಿ ಚರ್ಚಿಸಿದ ನಂತರ ಈ ಕುರಿತಾಗಿ ನಿರ್ಧರಿಸಲು ಸಭೆಯು ತೀರ್ಮಾನಿಸಿತು.<br>2. ಭಾರತೀಯ ರೇಲ್ವೆ ಇಲಾಖೆಯಲ್ಲಿ ಖಾಲಿ ಇರುವ **30,307** ಹುದ್ದೆಗಳು ಹಾಗೂ ಸರ್ಕಾರದ ವಿವಿಧ ಇಲಾಖೆಗಳನ್ನು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆಯೋಜಿಸಲಾಗುತ್ತದೆ. ಕಾರಣ, ಮುಖ್ಯ ಆವರಣ, ಬೆಳಗಾವಿ ಮತ್ತು ಸ್ನಾತಕೋತ್ತರ ಕೇಂದ್ರ, ವಿಜಯಪುರದ ಆಸಕ್ತ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತೀರ್ಣ ಹೊಂದಲು ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ ನೇಮಕಾತಿ ಕುರಿತಾಗಿ ವಿಶ್ವವಿದ್ಯಾಲಯದ ಸೂಚನಾ ಫಲಕಗಳಲ್ಲಿ ಜಾಹೀರಾತುಗಳನ್ನು ಅಳವಡಿಸುವ ಮನವಿಗೆ, ಸರ್ಕಾರವು ವಿವಿಧ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸುವ ಅಧಿಸೂಚನೆ ಮಾಹಿತಿಯನ್ನು ವಿಶ್ವವಿದ್ಯಾಲಯದ ಮತ್ತು ಸ್ನಾತಕೋತ್ತರ ಕೇಂದ್ರ, ವಿಜಯಪುರ ಇಲ್ಲಿ ಸೂಚನಾ ಫಲಕಗಳಲ್ಲಿ ಅಳವಡಿಸಲು ಸಭೆಯು ಸೂಚಿಸಿತು. ಮುಂದುವರೆದು, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ವಿದ್ಯಾರ್ಥಿಗಳು ತೇರ್ಗಡೆ ಹೊಂದಲು ಸಂಬಂಧಿಸಿದ ವಿಡಿಯೋಗಳನ್ನು ವಿಶ್ವವಿದ್ಯಾಲಯ ವೆಬ್‌ಸೈಟ್‌ನಲ್ಲಿ ಅಪಲೋಡ್ ಹಾಗೂ ಆನಲೈನ್ ಮೂಲಕ ತರಬೇತಿ ನೀಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಮಾನ್ಯ ಕುಲಪತಿಗಳು ಉತ್ತರಿಸಿದರು.<br>3. ಡಾ. ಫ. ಗು ಹಳಕಟ್ಟಿ ಸ್ನಾತಕೋತ್ತರ ಕೇಂದ್ರದಲ್ಲಿ ಕೌಶಲ್ಯ ಕೇಂದ್ರವನ್ನು PM-Usha ಯೋಜನೆಯಡಿಯಲ್ಲಿ New Modole Degree ತೆರೆಯಲು ನಿರ್ಣಯಿಸಿದ್ದು ಈ ಕುರಿತು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಆದರೆ, PM-Usha ಯೋಜನೆಯಡಿ ಅರ್ಜಿ ಸಲ್ಲಿಸುವ ವಿಧಾನಗಳ ಕುರಿತಾಗಿ ಸ್ಪಷ್ಟವಾದ ಮಾಹಿತಿ ಲಭ್ಯವಿಲ್ಲವಾದ ಕಾರಣ, ಈ ಕುರಿತಾಗಿ ಹೆಚ್ಚಿನ ಮಾಹಿತಿಯನ್ನು ನೀಡಬೇಕೆಂದು ಸದಸ್ಯರಾದ ಶ್ರೀ ರಫೀ ಭಂಡಾರಿ ಇವರಿಗೆ ತಿಳಿಸಲಾಯಿತು.<br>4. ಸಂಶೋಧನಾ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳ ದೂರುಗಳು/ಕುಂದು ಕೊರತೆಗಳನ್ನು ನಿವಾರಿಸಲು ಸಿಂಡಿಕೇಟ್ ಸದಸ್ಯರು ಮತ್ತು ವಿದ್ಯಾವಿಷಯಕ್ ಪರಿಷತ್ತಿನ ಸದಸ್ಯರು ಹಾಗೂ ಡೀನ್ ಇವರುಗಳನ್ನು ಒಳಗೊಂಡ ಸಮಿತಿಯನ್ನು ರಚಿಸುವ ಮನವಿಯನ್ನು ಪರಿಶೀಲಿಸಿದ ಸಭೆಯು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸಲು ಈಗಾಗಲೇ ಸಮಿತಿಯೊಂದು ಚಾಲ್ತಿಯಲ್ಲಿ ಇರುತ್ತದೆ. ಸದಸ್ಯರುಗಳ ಮನವಿಯಂತೆ ವಿದ್ಯಾರ್ಥಿಗಳ ಶೈಕ್ಷಣಿಕ ಅಭ್ಯುದಯಕ್ಕೆ "ಜಂಟಿ ಸಮಿತಿ" ರಚಿಸಲು ಸಭೆಯು ತೀರ್ಮಾನಿಸಿತು.<br>5. ವಿಜಯಪುರದ ಸ್ನಾತಕೋತ್ತರ ಕೇಂದ್ರದಲ್ಲಿ **2025-26** ನೇ ಶೈಕ್ಷಣಿಕ ಸಾಲಿಗೆ ಇಂಗ್ಲೀಷ್, ಎಂ.ಎಸ್.ಡಬ್ಲ್ಯೂ., ಎಂ.ಕಾಂ ಹಾಗೂ ಇತಿಹಾಸ ಕೋರ್ಸ್‌ಗಳನ್ನು ಆರಂಭವಾಗಲಿದ್ದು ವಿಭಾಗಳಿಗೆ ಸಂಬಂಧಿಸಿದಂತೆ ಒಬ್ಬ ಖಾಯಂ ಪ್ರಾಧ್ಯಾಪಕರು ಹಾಗೂ ಸಹಾಯಕ ಪ್ರಾಧ್ಯಾಪಕರನ್ನು ವರ್ಗಾಯಿಸುವ/ನಿಯೋಜಿಸುವ ವಿಷಯಕ್ಕೆ, **2025-26** ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಪ್ರಕ್ರಿಯೆಯಲ್ಲಿರುವುದರಿಂದ ಪ್ರವೇಶಾತಿ ಪೂರ್ಣಗೊಂಡ ನಂತರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಕುಲಪತಿಗಳು ತಿಳಿಸಿದರು.<br>ಶ್ರೀ ವಿನೀತ ಜೋಶಿ ಇವರು ಪ್ರಸ್ತಾಪಿಸಿದ ವಿಷಯಗಳು:<br>1. ದಿನಾಂಕ: **08.07.2025** ರಂದು ಜರುಗಿದ ಸಿಂಡಿಕೇಟ್ ಸಭೆಯ ವಿಷಯಸೂಚಿ ಸಂಖ್ಯೆ |

2025/07/ IX ರಲ್ಲಿ **2025-26ನೇ** ಶೈಕ್ಷಣಿಕ ಸಾಲಿನಿಂದ ಆಂತರಿಕ ಅಂಕಗಳನ್ನು Work Book ಮುಖಾಂತರ ಜಾರಿಗೊಳಿಸಲು ತೀರ್ಮಾನಕ್ಕೆ ತಮ್ಮ ಆಕ್ಷೇಪಣೆ ವ್ಯಕ್ತಪಡಿಸಿದರು. ಸಭೆಯಲ್ಲಿ ಕೆಲವು ವಿಭಾಗಗಳ ಅಭ್ಯಾಸ ಮಂಡಳಿಯು ತಯಾರಿಸಿದ ಏಕಲವ್ಯ Work Book ಮಾದರಿಯನ್ನು ಪ್ರಸ್ತುತಪಡಿಸಲಾಯಿತು. ಸದಸ್ಯರುಗಳು ಈ ಕೆಳಕಾಣಿಸಿದಂತೆ ಅಭಿಪ್ರಾಯಿಸಿದರು.

ಡಾ.ಕಾವೇರಿ.ಎಚ್.ಎಂ.:

Work Book ಮಾದರಿಯಲ್ಲಿ ವಿದ್ಯಾರ್ಥಿಗಳು ಬರೆದಿರುವ ಲೇಖನವನ್ನು ಪರಿಶೀಲಿಸಿ ಗುಣಮಟ್ಟದ ಕುರಿತಾಗಿ ಅಸಮಾಧಾನ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳಿಗೆ ಸಂಶೋಧನೆಗೆ ಸಂಬಂಧಿಸಿದ ಕಾರ್ಯಗಳಲ್ಲಿ ತೊಡಗಲು ಉತ್ತೇಜನ ನೀಡಬೇಕು ಎಂದು Work Book ಕುರಿತಾಗಿ ಆಕ್ಷೇಪಣೆ ವ್ಯಕ್ತಪಡಿಸಿದರು.

ಶ್ರೀ ಮಹಾಂತೇಶ ಕಂಬಾರ:

Work Book ನಿಂದಾಗಿ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆ ಉಂಟಾಗುತ್ತದೆ. ಕಾರಣ, ವಿಶ್ವವಿದ್ಯಾಲಯದ ವತಿಯಿಂದ ವಿದ್ಯಾರ್ಥಿಗಳಿಗೆ Work Book ನೀಡುವುದು ಸೂಕ್ತ ಎಂದರು.

ಶ್ರೀ ಆರ್. ಎಂ. ದೇವರಡ್ಡಿ:

ವಿದ್ಯಾರ್ಥಿಗಳ ಕೌಶಲ್ಯಗಳನ್ನು ಮೌಲ್ಯೀಕರಿಸಿ ಆಂತರಿಕ ಅಂಕಗಳನ್ನು ನೀಡಲು Work Book ಸಹಾಯಕಾರಿಯಾಗಲಿದೆ ಎಂದು ಹೇಳಿ, Work Book ಜಾರಿಗೊಳಿಸುವ ತೀರ್ಮಾನವನ್ನು ಸ್ವಾಗತಿಸಿದರು.

ಚರ್ಚಿಸಿದ ಸಭೆಯು, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ಅಭ್ಯಾಸ ಮಂಡಳಿಯು ತಯಾರಿಸಿದ Work Book ಗಳನ್ನು ವಿದ್ಯಾರ್ಥಿಗಳಿಗೆ ಮುದ್ರಿಸಿ ವಿತರಿಸುವ ಬದಲಾಗಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಅಳವಡಿಸುವುದು ಹಾಗೂ ವೆಬ್‌ಸೈಟ್‌ನಿಂದ ವಿದ್ಯಾರ್ಥಿಗಳು Work Book ಪಡೆದುಕೊಂಡ ಕೌಶಲ್ಯ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಲು ಸಭೆಯು ತೀರ್ಮಾನಿಸಲಾಯಿತು.

2. ಡಾ. ಬಸವರಾಜ ಬಗಾಡೆ, ಸಹಾಯಕ ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ವಿಭಾಗ ಇವರ ನೇಮಕಾತಿ ವಿಷಯದ ಕುರಿತು ನ್ಯಾಯಾಲಯದಲ್ಲಿ ತಡೆಯಾಜ್ಞೆ ದಾಖಲಾಗಿದ್ದು, ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಕಾನೂನು ಅಭಿಪ್ರಾಯದೊಂದಿಗೆ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ ಎಂದು ಕುಲಸಚಿವರು ತಿಳಿಸಿದರು.

ಶ್ರೀ ಮಹಾಂತೇಶ ಕಂಬಾರ:

ಪ್ರಾಂಶುಪಾಲರ ಗುಂಪಿನಿಂದ ನೇಮಕಗೊಂಡ ಸಿಂಡಿಕೇಟ್ ಸದಸ್ಯರುಗಳಿಗೆ ವಿಶ್ವವಿದ್ಯಾಲಯದಿಂದ Letter Head ಮತ್ತು Visiting Card ನೀಡಿರುವುದಿಲ್ಲ. ಪ್ರಿಂಟಿಂಗ್ ಕಾರ್ಯಕ್ಕಾಗಿ ಶಿವಾ ಆಫ್‌ಸೆಟ್ಸ್, ಬೆಳಗಾವಿ ಇವರೊಂದಿಗೆ ಮಾಡಿಕೊಳ್ಳಲಾದ ಕರಾರು ಒಪ್ಪಂದವನ್ನು ರದ್ದುಪಡಿಸಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಗುತ್ತಿಗೆದಾರರು ಸ್ಥಳೀಯ ಪ್ರದೇಶದಲ್ಲಿ ಪ್ರಿಟಿಂಗ್ ಕಾರ್ಯಕ್ಕೆ ಸಂಬಂಧಿಸಿದ ಮೂಲಸೌಕರ್ಯವನ್ನು ಹೊಂದಿರುವ ಗುತ್ತಿಗೆದಾರರಾಗಿರಬೇಕೆಂದು ಕರಾರಿನಲ್ಲಿ ಶರತ್ತು ವಿಧಿಸಲಾಗಿತ್ತು. ಅದಾಗ್ಯೂ ಒಪ್ಪಂದವನ್ನು ರದ್ದುಪಡಿಸಲಾಗಿದೆ ಎಂದರು. ಪ್ರತಿಕ್ರಿಯಿಸಿದ ಕುಲಸಚಿವರು ಪ್ರಿಂಟಿಂಗ್, ಬ್ಯಾನರ್ ಇನ್ನಿತರ ಕಾರ್ಯಗಳಿಗಾಗಿ ಶಿವಾ ಆಫ್‌ಸೆಟ್ಸ್, ಬೆಳಗಾವಿ ಇವರು ಮತ್ತು ಬೇರೆ ಗುತ್ತಿಗೆದಾರರು ನಿಗದಿಪಡಿಸುವ ದರಗಳ ತುಲನಾತ್ಮಕ ಪಟ್ಟಿ(Comparative Chart) ಮಾಹಿತಿ ಸಭೆಗೆ ನೀಡಿದರು. ಬೇರೆ ಗುತ್ತಿಗೆದಾರರ ದರಗಳನ್ನು ಹೋಲಿಸಿದಾಗ ಶಿವಾ ಆಫ್‌ಸೆಟ್ಸ್, ಬೆಳಗಾವಿ ಇವರು ದುಪ್ಪಟ್ಟು ಹಣವನ್ನು ನಿಗದಿಪಡಿಸುತ್ತಿರುವುದು ಕಂಡು ಬಂದಿತು. ವಿಶ್ವವಿದ್ಯಾಲಯದ ಆರ್ಥಿಕ ಹಿತದೃಷ್ಟಿಯಿಂದ ಕಡಿಮೆ ದರ ನಿಗದಿಪಡಿಸಿರುವ ಗುತ್ತಿಗೆದಾರರಿಗೆ "Open Tender" ಮೂಲಕ ನೀಡಿರುವ ನಿಯಮಾನುಸಾರ ಕ್ರಮವನ್ನು ಸಭೆಯು ಒಪ್ಪಿತು

| ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು | | |
|---|---|---|
| 28 | 2025/08/I | 2025-26 ನೇ ಶೈಕ್ಷಣಿಕ ಸಾಲಿಗಾಗಿ ಪರೀಕ್ಷಕರ ಮಂಡಳಿಗಳನ್ನು ರಚಿಸುವ ಕುರಿತು |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **2025-26**ನೇ ಶೈಕ್ಷಣಿಕ ಸಾಲಿನ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಲು ಪರೀಕ್ಷಕರ ನೇಮಕಾತಿ ಮಂಡಳಿಗಳನ್ನು ರಚಿಸಲು ಪರೀಕ್ಷಕರ ಹೆಸರುಗಳನ್ನು ಅಂತಿಮಗೊಳಿಸಿ ಶಿಫಾರಸ್ಸು ಮಾಡಿ ಪರೀಕ್ಷಕರ ನೇಮಕಾತಿ ಮಂಡಳಿಗಳು ನಡಾವಳಿಗಳನ್ನು ಸಲ್ಲಿಸಿರುತ್ತಾರೆ. ಸದರಿ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗವಾರು ಪರೀಕ್ಷಕರ ಪಟ್ಟಿಗಳನ್ನು ಪರಿಶೀಲಿಸಿದ ಸಭೆಯು, ಪರೀಕ್ಷಕರ ನೇಮಕಾತಿ ಆದೇಶ ಹೊರಡಿಸಲು ಹಾಗೂ ಸದರಿ ಆದೇಶದ ನಂತರ ಪರೀಕ್ಷಕರ ನೇಮಕಾತಿ ಮಂಡಳಿಗೆ ನೇಮಕಗೊಂಡ ಅಧ್ಯಕ್ಷರು/ಸದಸ್ಯರು ವರ್ಗಾವಣೆ, ನಿವೃತ್ತಿ, ಅಮಾನತ್ತು ಹಾಗೂ ಇತರೆ ಕಾರಣಗಳಿಂದ ಪರೀಕ್ಷಾ ಕಾರ್ಯಗಳಿಗೆ ಲಭ್ಯವಾಗದೇ ಇದ್ದಲ್ಲಿ ಕಾಯ್ದಿರಿಸಿದ ಸದಸ್ಯರು/ಲಭ್ಯವಿರುವ ಬೇರೆ ಬೋಧಕ ಸಿಬ್ಬಂದಿಗಳನ್ನು ಬಳಸಿಕೊಳ್ಳಲು ಸಭೆಯು ತೀರ್ಮಾನಿಸಿತು. |
| 29 | 2025/08/II | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದ ಭೂಮಿಯನ್ನು ಉಳಿಸಿಕೊಳ್ಳುವ ಕುರಿತು ಸಭೆಯಲ್ಲಿ ಚರ್ಚಿಸುವ ಕುರಿತು. |
| | ತೀರ್ಮಾನ | ಭೂತರಾಮನಹಟ್ಟಿಯ ಮುಖ್ಯ ಆವರಣದ ಭೂಮಿಯನ್ನು ವಿಶ್ವವಿದ್ಯಾಲಯಕ್ಕೆ ಉಳಿಸಿಕೊಳ್ಳಲು ಅಗತ್ಯ ಪ್ರಸ್ತಾವನೆ ಸಲ್ಲಿಸುವ ಕುರಿತಾಗಿ ಮಾತನಾಡಿದ ಕುಲಸಚಿವರು, ಈ ಹಿಂದೆ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ವ್ಯಾಪ್ತಿಗೆ ಒಳಪಟ್ಟಿದ ಸ್ನಾತಕೋತ್ತರ ಕೇಂದ್ರ ನಿರ್ಮಾಣಕ್ಕೆ(ಈಗಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ) ಭೂತರಾಮನಹಟ್ಟಿಯಲ್ಲಿ ಅಗತ್ಯ ಜಮೀನು ಪಡೆಯಲು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಪತ್ರ ಬರೆದಿರುತ್ತಾರೆ. ಪ್ರತಿಯಾಗಿ ಜಿಲ್ಲಾಧಿಕಾರಿಗಳು ಭೂತರಾಮನಹಟ್ಟಿಯ ಜಮೀನು ಅರಣ್ಯ ಮೀಸಲು ಪ್ರದೇಶವೆಂದು ಅರಣ್ಯ ಇಲಾಖೆ ಆಕ್ಷೇಪಣೆ ಸಲ್ಲಿಸಿ ಕ್ಲೇಮ ಮಾಡುತ್ತಿರುವುದರಿಂದ ಪರ್ಯಾಯವಾಗಿ 173 ಎಕರೆ ಜಮೀನನ್ನು ಖಾನಾಪೂರದಲ್ಲಿ ಅರಣ್ಯವನ್ನು ಬೆಳಸಲು ಅರಣ್ಯ ಇಲಾಖೆಗೆ ಸರ್ಕಾರದ ವತಿಯಿಂದ ಪರ್ಯಾಯ ಜಮೀನು ಮಂಜೂರಾತಿ ಮಾಡಿ, ಪ್ರಸ್ತುತ ಭೂತರಾಮನಹಟ್ಟಿಯ ಜಮೀನನ್ನು ವಿಶ್ವವಿದ್ಯಾಲಯಕ್ಕೆ ನೀಡಿರುತ್ತಾರೆ. ಅದರಂತೆ, ರಾಣಿ ವಿಶ್ವವಿದ್ಯಾಲಯವು ಸ್ವತಂತ್ರ ವಿಶ್ವವಿದ್ಯಾಲಯವಾಗಿ ಘೋಷಣೆಯಾದ ನಂತರ ಭೂತರಾಮನಹಟ್ಟಿ ಜಮೀನು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ವಾಯತ್ತಕ್ಕೆ ಒಳಪಟ್ಟಿರುತ್ತದೆ. ಈಗ ಅರಣ್ಯ ಇಲಾಖೆಯವರು ಆಕ್ಷೇಪಣೆ ಸಲ್ಲಿಸಿ ಕ್ಲೇಮ ಮಾಡುತ್ತಿರುವುದರಿಂದ, ಈ ಕುರಿತಾಗಿ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಲಭ್ಯವಿರುವ **173** ಎಕರೆ ಜಮೀನನ್ನು ಪೂರ್ಣ ಪ್ರಮಾಣದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ವಾಯತ್ತತೆಯಲ್ಲಿ ಪಡೆದುಕೊಳ್ಳಲು ಮೊದಲ ಆದ್ಯತೆ ನೀಡಲಾಗುವುದು. ಯಶಸ್ವಿಯಾಗದೇ ಇದ್ದರೆ ಬೇರೆ ಬೇರೆ ವಿಧಾನದಲ್ಲಿ ಅಗತ್ಯ ನಕ್ಷೆ ಸರ್ವೇ ಸಿದ್ಧಪಡಿಸಿ ಕ್ರಮ ಜರುಗಿಸಲಾಗುವುದು ಎಂದು ಕುಲಸಚಿವರು ಸಭೆಗೆ ತಿಳಿಸಿದರು. ಸಭೆಯು ಅನುಮೋದನೆ ನೀಡಿತು. |
| 30 | 2025/08/III | ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಬೆಳಗಾವಿಯ ನಗರಾಭಿವೃದ್ಧಿಯಿಂದ ಹಂಚಿಕೆಯಾದ ಪ್ರಾಧಿಕಾರದ ಯೋಜನೆ ಸಂಖ್ಯೆ: 35 ರಾಮತೀರ್ಥ ನಗರ, ಕಣಬರ್ಗಿ ಗ್ರಾಮದ ರಿ.ಸ.ನಂ. 607 ಮತ್ತು 627 ರ ವಿನ್ಯಾಸದಲ್ಲಿ ಒಟ್ಟು ಕ್ಷೇತ್ರ 6670 ಚ.ಮೀ ನಾಗರಿಕ ಸೌಲಭ್ಯ ನಿವೇಶನಕ್ಕೆ ಭರಿಸಿದ ಮೊತ್ತವನ್ನು ಮರಳಿ ನೀಡುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಹಂಚಿಕೆಯಾದ ಪ್ರಾಧಿಕಾರದ ಯೋಜನೆ ಸಂಖ್ಯೆ: **35+43+43**ಎ ರಾಮತೀರ್ಥ ನಗರದಲ್ಲಿ, ಕಣಬರ್ಗಿ ಗ್ರಾಮದ ರಿ.ಸ.ನಂ.**607** ಮತ್ತು **624** ರ ವಿನ್ಯಾಸದಲ್ಲಿ ಒಟ್ಟು ಕ್ಷೇತ್ರ **6670** ಚ.ಮೀ. ನಾಗರಿಕ ಸೌಲಭ್ಯದ ನಿವೇಶನವನ್ನು ಹಾಕಿ, ಇಂಡಿಯಾ ಬೆಳಗಾವಿ ಇವರಿಗೆ ನೀಡಲು ತೀರ್ಮಾನಿಸಿ ವಿಶ್ವವಿದ್ಯಾಲಯಕ್ಕೆ ಬೇರೆ ನಿವೇಶನವನ್ನು ರಿ.ಸ.ನಂ.**607,608,611** ಮತ್ತು **612** ರಲ್ಲಿಯ ಖುಲ್ಲಾ ಜಾಗೆಗೆ ಸ್ಥಳಾಂತರಿಸಲು ನಿಶ್ಚಯಿಸಿದ್ದು ತಿದ್ದುಪಡಿ ಗುತ್ತಿಗೆ ಪತ್ರ ಮಾಡಿಕೊಳ್ಳಲು ಪ್ರಾಧಿಕಾರವು ವಿಶ್ವವಿದ್ಯಾಲಯಕ್ಕೆ ದಿನಾಂಕ: **22-09-2020**ರಂದು ಸೂಚಿಸಿತು. |

<table>
<tr><td></td><td></td><td>ಮುಂದುವರೆದು, ವಿಶ್ವವಿದ್ಯಾಲಯಕ್ಕೆ ಹಂಚಿಕೆಯಾದ ಪ್ರಾಧಿಕಾರದ ನಿವೇಶನದಲ್ಲಿ ಎಸ್.ಸಿ./ಎಸ್.ಟಿ. ವಿದ್ಯಾರ್ಥಿನಿಯರಿಗೆ ವಸತಿ ನಿಲಯಗಳನ್ನು ಮತ್ತು ಮಾನ್ಯ ಕುಲಪತಿಗಳ ಹಾಗೂ ಕುಲಸಚಿವರುಗಳ ವಸತಿಗೃಹಗಳನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಲಾಗಿತ್ತು. ಆದರೆ ಪರ್ಯಾಯವಾಗಿ ಹಂಚಿಕೆಯಾದ ನಿವೇಶನವನ್ನು ವಿಶ್ವವಿದ್ಯಾಲಯದ ಆಡಳಿತಾಧಿಕಾರಿಗಳು ಪರಿಶೀಲಿಸಿದಾಗ ವಿಶ್ವವಿದ್ಯಾಲಯದ ಚಟುವಟಿಕೆಗಳಿಗೆ ಯೋಗ್ಯವಿಲ್ಲವೆಂದು ಕಂಡುಬಂದಿರುತ್ತದೆ. ಆದುದರಿಂದ, ಸದರಿ ನಿವೇಶನವನ್ನು ಪ್ರಾಧಿಕಾರಕ್ಕೆ ಹಿಂದಿರುಗಿಸಿ ನಾವು ನೀಡಿದ ಗುತ್ತಿಗೆ ಹಣ ರೂ. 2,66,12,273/-ಗಳನ್ನು ಹಿಂಪಡೆಯಬೇಕೆಂದು ತೀರ್ಮಾನಿಸಿ ದಿನಾಂಕ: 24-07-2020 ರಂದು ಮಾನ್ಯ ಆಯುಕ್ತರಿಗೆ ಪತ್ರ ಬರೆಯಲಾಗಿತ್ತು. ಸದರಿ ಹಣ ಹಿಂಪಡೆಯುವ ಕಾರ್ಯವು ಪ್ರಗತಿಯಲ್ಲಿದೆ. ಸದರಿ ವಿಷಯದಲ್ಲಿ ನಿವೇಶನದ ಗುತ್ತಿಗೆ ಹಣಕ್ಕೆ 04 ವರ್ಷಗಳ ಅವಧಿಗೆ ಬಡ್ಡಿ ಆಕರಿಸಿ, ಬೇಡಿಕೆ ಸಲ್ಲಿಸುವ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಈ ನಾಲ್ಕು ವರ್ಷದಲ್ಲಿ ಕೇಂದ್ರಿಕೃತ ಬ್ಯಾಂಕ್‌ಗಳು ಮುದ್ಧತಿ ಠೇವಣಿಗೆ ನೀಡುವ ಬಡ್ಡಿ ದರದ ಸರಾಸರಿ ದರವನ್ನು ಆಕರಿಸಲು ಸಭೆಯು ತೀರ್ಮಾನಿಸಿತು.</td></tr>
<tr><td>31</td><td>2025/08/IV</td><td>ಮುಖ್ಯ ಆವರಣದ ಪ್ರತಿ ವಿಭಾಗದ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು Top Merit ನಲ್ಲಿ ಇರುವ ತಲಾ ಒಬ್ಬ ವಿದ್ಯಾರ್ಥಿಗೆ ವಿಶ್ವವಿದ್ಯಾಲಯದ ವತಿಯಿಂದ ಪ್ರತಿ ವರ್ಷಕ್ಕೆ ರೂ. 5000/-ದಂತೆ Student Scholarship ನೀಡುವ ಕುರಿತು.</td></tr>
<tr><td></td><td>ತೀರ್ಮಾನ</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಸ್ನಾತಕೋತ್ತರ ಕೋರ್ಸಗಳಿಗೆ ಪ್ರವೇಶ ಪಡೆದುಕೊಂಡಿರುವ ವಿದ್ಯಾರ್ಥಿಗಳಲ್ಲಿ ಗರಿಷ್ಠ ಅಂಕ ಪಡೆದು Top Merit ದಲ್ಲಿ ಪ್ರವೇಶ ಪಡೆದ ಪ್ರತಿ ವಿಭಾಗದ ತಲಾ ಒರ್ವ ವಿದ್ಯಾರ್ಥಿಗೆ ಪ್ರತಿ ವರ್ಷಕ್ಕೆ ರೂ. 5000/-ರಂತೆ ಜಿಮಾಖಾನ ಸಮಾರಂಭ ಕಾರ್ಯಕ್ರಮದಲ್ಲಿ ಇತರೆ ವಿದ್ಯಾರ್ಥಿಗಳಿಗೆ ಉತ್ತೇಜನೆ ಹಾಗೂ ಸ್ಪೂರ್ತಿ ನೀಡುವ ದೃಷ್ಠಿಯಿಂದ, 2025-26 ನೇ ಸಾಲಿನಿಂದ Subject Topper ಗೆ Student Scholarship ನ್ನು ನೀಡುವ ವಿಷಯಕ್ಕೆ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು.</td></tr>
<tr><td>31</td><td>2025/08/V</td><td>ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮುಖ್ಯ ಆವರಣದಲ್ಲಿರುವ ಕೆಲವು ಸ್ನಾತಕೋತ್ತರ ವಿಭಾಗಗಳ ಪ್ರವೇಶ ಮಿತಿ ಕುರಿತು</td></tr>
<tr><td></td><td>ತೀರ್ಮಾನ</td><td>ದಿನಾಂಕ: 08.08.2025 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿರುವ ಈ ಕೆಳಕಾಣಿಸಿದ ವಿಭಾಗಗಳ ಪ್ರವೇಶಾತಿ ಮಿತಿಗಳನ್ನು ಪರಿಷ್ಕರಿಸುವಂತೆ ತೀರ್ಮಾನಿಸಲಾಗಿದೆ. ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.
<table>
<tr><th>ಸಂ</th><th>ಕೋರ್ಸ್ ಹೆಸರು</th><th>ಪ್ರಸ್ತುತ ನಿಗದಿಪಡಿಸಿದ ಪ್ರವೇಶ ಶುಲ್ಕ</th><th>ಪರಿಷ್ಕೃತ ಪ್ರವೇಶ ಮಿತಿ</th></tr>
<tr><td>01</td><td>ಭೂಗೋಳಶಾಸ್ತ್ರ ವಿಭಾಗ</td><td>20</td><td>30</td></tr>
<tr><td>02</td><td>ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ</td><td>20</td><td>30</td></tr>
<tr><td>03</td><td>ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ</td><td>20</td><td>30</td></tr>
<tr><td>04</td><td>ಇತಿಹಾಸ ವಿಭಾಗ</td><td>30</td><td>40</td></tr>
<tr><td>05</td><td>ಮರಾಠಿ ವಿಭಾಗ</td><td>60</td><td>40</td></tr>
</table></td></tr>
<tr><td>32</td><td>2025/08/VI</td><td>2025-26 ನೇ ಶೈಕ್ಷಣಿಕ ಸಾಲಿನಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಭೋಜನಾ ವೆಚ್ಚದ ಮೊತ್ತವನ್ನು ನೇರವಾಗಿ ಊಟ/ಉಪಹಾರ ಸರಬುರಾಜುದಾರರಿಗೆ(ವೆಂಡರ್) ಸಂದಾಯ ಮಾಡುವ ಕುರಿತು</td></tr>
<tr><td></td><td>ತೀರ್ಮಾನ</td><td>2025-26 ನೇ ಶೈಕ್ಷಣಿಕ ಸಾಲಿಗೆ ಪ್ರಥಮ/ದ್ವಿತೀಯ ವರ್ಷದ ವಿದ್ಯಾರ್ಥಿಗಳು ಬ್ರಹ್ಮಪುತ್ರ ಹಾಗೂ ಕೃಷ್ಣಾ ವಸತಿ ನಿಲಯಗಳಲ್ಲಿ ಪ್ರವೇಶ ಪಡೆದು ವಾಸವಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ಪ್ರತಿ ವಿದ್ಯಾರ್ಥಿಗೆ ಹೆಚ್ಚುವರಿ ಭೋಜನಾ ವೆಚ್ಚವೆಂದು ರೂ. 800/-ರಂತೆ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಶಿಷ್ಯವೇತನ ರೂಪದಲ್ಲಿ ಮಂಜೂರು ಆಗಬೇಕಾದ ಭೋಜನಾ ವೆಚ್ಚವು ರೂ. 1750/-ರಂತೆ ಒಟ್ಟು ರೂ.</td></tr>
</table>

| | | |
|---|---|---|
| | | **2550/–**ರಂತೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ(**24.10%**) ರಿಂದ ಕಳೆದ ವರ್ಷದವರೆಗೆ ವಿದ್ಯಾರ್ಥಿಗಳ ಖಾತೆಗೆ ಸಂದಾಯ ಮಾಡಲಾಗುತ್ತಿದೆ. ಮುಂದುವರೆದು, **2025–26**ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾಲಯದ ಮುಖ್ಯ ಆವರಣದ ಬ್ರಹ್ಮಪುತ್ರ ಹಾಗೂ ಕೃಷ್ಣಾ ವಸತಿ ನಿಲಯಗಳಲ್ಲಿ ಪ್ರವೇಶ ಪಡೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಭೋಜನಾ ವೆಚ್ಚದ ಮೊತ್ತವನ್ನು ಊಟ/ಉಪಹಾರ ಸರಬುರಾಜುದಾರರಿಗೆ(ವೆಂಡರ) ನೇರವಾಗಿ ಇವರ ಖಾತೆಗೆ ಸಂದಾಯ ಮಾಡಲು ಸಭೆಯು ಅನುಮೋದನೆ ನೀಡಿತು.<br>ಮುಂದುವರೆದು, ಸಮಾಜ ಕಲ್ಯಾಣ ಇಲಾಖೆ ನಿಗದಿಪಡಿಸಿರುವ ಊಟದ Menu ಪ್ರಕಾರ ಉತ್ತಮ ಗುಣಮಟ್ಟದ ಊಟ ನೀಡಲು ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಹಣದ ಬದಲು ಊಟದ ವ್ಯವಸ್ಥೆ ಕಲ್ಪಿಸಲು ಸಭೆಯು ಅನುಮೋದನೆ ನೀಡಿತು. |
| 33 | 2025/08/VIII | ಉಳಿಕೆ ವೃಂದದ, ಪರಿಶಿಷ್ಟ ಪಂಗಡದ ಕಛೇರಿ ಅಧೀಕ್ಷಕರ–01 ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ನೇಮಕಾತಿ ಮಂಡಳಿಯವರು ಸಲ್ಲಿಸಿದ ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿಗೆ ಸರಕಾರದಿಂದ ಮಂಜೂರಾದ ಕಛೇರಿ ಅಧೀಕ್ಷರ–**03** ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಯಿಂದ ಅನುಮತಿ ಪಡೆಯಲಾಗಿರುತ್ತದೆ. ನಂತರ ದಿನಾಂಕ: **09.02.2023** ರನ್ವಯ **03** ಹುದ್ದೆಗಳನ್ನು (ಎಸ್.ಸಿ.–**01**, ಜಿ.ಎಂ.–**01** ಎಸ್.ಟಿ–**01**)ಭರ್ತಿ ಮಾಡಿಕೊಳ್ಳಲು ನೇಮಕಾತಿ ಅಧಿಸೂಚನೆಯನ್ನು ಪ್ರಕಟಿಸಲಾಗಿತ್ತು. ಇವುಗಳಲ್ಲಿ ಕಛೇರಿ ಅಧೀಕ್ಷಕರ–**02** (ಎಸ್.ಸಿ.–**01**, ಜಿ.ಎಂ.–**01**) ಹುದ್ದೆಗಳನ್ನು ಮಾತ್ರ ನೇಮಕಾತಿ ಮಾಡಿಕೊಂಡಿದ್ದು, ಪರಿಶಿಷ್ಟ ಪಂಗಡದ(ಎಸ್.ಟಿ.)–**01** ಹುದ್ದೆಗೆ ವಿಶ್ವವಿದ್ಯಾಲಯದ ನಿಯಮಾವಳಿಗಳು ಮತ್ತು ಮಾನದಂಡಗಳನ್ನು ಪೂರೈಸಿರುವ ಅಭ್ಯರ್ಥಿಗಳು ಇಲ್ಲದೇ ಇರುವುದರಿಂದ ಸದರಿ ಹುದ್ದೆಯನ್ನು ನೇಮಕಾತಿ ಮಾಡಿಕೊಂಡಿರುವುದಿಲ್ಲ. ತದನಂತರ ಸದರಿ ವಿಷಯವನ್ನು ದಿನಾಂಕ: **21.08.2024** ರಂದು ಜರುಗಿದ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಪಡೆದುಕೊಂಡು ನೇಮಕಾತಿಗಾಗಿ **03.03.2025** ರಂದು ಮತ್ತೊಮ್ಮೆ ನೇಮಕಾತಿ ಅಧಿಸೂಚನೆ ಪ್ರಕಟಿಸಲಾಗಿರುತ್ತದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ವಿಶ್ವವಿದ್ಯಾಲಯದ ನಿಯಮಾನುಸಾರ ಲಿಖಿತ ಪರೀಕ್ಷೆ ಮತ್ತು ಗಣಕಯಂತ್ರ ಜ್ಞಾನ ಕೌಶಲ್ಯ ಪರೀಕ್ಷೆಗಳನ್ನು ಜರುಗಿಸಿ ದಿನಾಂಕ: **11.08.2025** ರಂದು ನೇಮಕಾತಿ ಮಂಡಳಿಯವರು ಸಂದರ್ಶನ ಕಾರ್ಯವನ್ನು ಜರುಗಿಸಿ ಗೌಪ್ಯವಾಗಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ನಡಾವಳಿಯನ್ನು ಸಕ್ಷಮ ಪ್ರಾಧಿಕಾರವಾದ ಸಿಂಡಿಕೇಟ್ ಸಭೆಯ ಮುಂದೆ ಮುಚ್ಚಿದ ಲಕೋಟೆಯನ್ನು ತೆರೆಯಲಾಯಿತು.<br>"ನೇಮಕಾತಿ ಮಂಡಳಿ"ಯು ಅಭ್ಯರ್ಥಿಯ ವಿದ್ಯಾರ್ಹತೆ, ಲಿಖಿತ ಪರೀಕ್ಷೆ, ಗಣಕಯಂತ್ರ ಜ್ಞಾನ ಕೌಶಲ್ಯ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಹೆಚ್ಚು ಅಂಕಪಡೆದ ಜೇಷ್ಠತೆಯ ಅನುಸಾರ ಶ್ರೀ ಕೆಂಪಣ್ಣಾ ಗುಳ್ಳಿ ಇವರ ಹೆಸರನ್ನು "ಕಛೇರಿ ಅಧೀಕ್ಷಕರ" ಹುದ್ದೆಗೆ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ "ಕಛೇರಿ ಅಧೀಕ್ಷಕರ" ಹುದ್ದೆ ನೇಮಕಾತಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |
| 34 | 2025/08/VIII | 14 ನೇ ವಾರ್ಷಿಕ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ನೀಡುವ ಕುರಿತು |
| | ತೀರ್ಮಾನ | **14** ನೇ ವಾರ್ಷಿಕ ಘಟಿಕೋತ್ಸವನ್ನು ಅದ್ದೂರಿಯಾಗಿ ಆಚರಿಸಲಾಗುತ್ತಿದ್ದು, ಕೆಲವು ಪ್ರಾಯೋಜಕರು ತಮ್ಮ ಆಸಕ್ತ ವಿಭಾಗಗಳಿಗೆ ದತ್ತಿನಿಧಿಯನ್ನು ನೀಡಿದ್ದು, ಸದರಿ ದತ್ತಿನಿಧಿಯ ಠೇವಣಿಯ ಬಡ್ಡಿ ಮೊತ್ತದಿಂದ ಕೆಲವೊಂದು ವಿಭಾಗಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಚಿನ್ನದ ಪದಕಗಳನ್ನು ನೀಡಲಾಗುತ್ತಿದೆ. ಮುಂದುವರೆದು, ಪ್ರಸ್ತುತ ನೀಡಲಾಗುತ್ತಿರುವ ಚಿನ್ನದ ಪದಕಗಳನ್ನು ಹೊರತುಪಡಿಸಿ ಇನ್ನುಳಿದ ವಿಭಾಗಗಳ ರ್‍ಯಾಂಕ್ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ನೀಡಲು ವಿಶ್ವವಿದ್ಯಾಲಯದಿಂದಲೇ ಸೂಕ್ತ ಕ್ರಮ ಕೈಗೊಳ್ಳಲು ಸಭೆಯು ಅನುಮೋದನೆ ನೀಡಿತು. |

| | | |
|---|---|---|
| 35 | 2025/08/IX | Construction of Rani Channamma University Phase-1 New Campus at Hirebagewadi in Belagavi ಕಾಮಗಾರಿಯ ಮೂರನೇ ಕಂತಿನ ಮೊತ್ತ ಸಂದಾಯ ಮಾಡುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ನೂತನ ಆವರಣ ಹಿರೇಬಾಗೇವಾಡಿಯಲ್ಲಿ Construction of Rani Channamma University Phase-1 New Campus at Hirebagewadi in Belagavi ಕಾಮಗಾರಿಯು ಮುಕ್ತಾಯದ ಹಂತದಲ್ಲಿರುತ್ತದೆ. ಸದರಿ ಕಾಮಗಾರಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ BSR Infratech India ಗುತ್ತಿಗೆದಾರರಿಗೆ ನೀಡಿದ್ದರು. ಸದರಿ ಕಾಮಗಾರಿಯ ಮೊದಲನೇ ಕಂತಿನ ಮೊತ್ತವನ್ನಾಗಿ ರೂ. **52.00** ಕೋಟಿಗಳನ್ನು ಹಾಗೂ ಎರಡನೇ ಕಂತಿನ ಮೊತ್ತವನ್ನಾಗಿ ರೂ. **30.00** ಕೋಟಿಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜನೀಯರಿಂಗ್ ವಿಭಾಗ, ಧಾರವಾಡ ಇವರಿಗೆ ಸಂದಾಯ ಮಾಡಲಾಗಿದೆ. ಪ್ರಸ್ತುತ, ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜನೀಯರಿಂಗ್ ವಿಭಾಗ, ಧಾರವಾಡ ಇವರು ವಿಶ್ವವಿದ್ಯಾಲಯಕ್ಕೆ ದಿನಾಂಕ: **27.06.2025** ಪತ್ರವನ್ನು ಸಲ್ಲಿಸಿ ಗುತ್ತಿಗೆ ಮೊತ್ತ ರೂ. **137,31,66,444.00**(ಜಿ.ಎಸ್.ಟಿ ಒಳಗೊಂಡಂತೆ) ಗಳಲ್ಲಿ ಬಾಕಿ ಉಳಿದ ಮೊತ್ತ ರೂ. **55,31,66,444.00/-**ಗಳನ್ನು ಸದರಿಯವರ ಕಛೇರಿಯ ಬ್ಯಾಂಕ್ ಖಾತೆಗೆ ಜಮೆ ಮಾಡುವಂತೆ ಕೋರಿರುತ್ತಾರೆ.<br>ಸದರಿಯವರ ಪತ್ರದನ್ವಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ MoU ಪ್ರಕಾರ ಲೆಕ್ಕಪರಿಶೋಧನಾಪಟ್ಟಿ, ಕಟ್ಟಡವಾರು ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿ ಹಾಗೂ ಪ್ರಸ್ತುತ ಹಂತದ ಛಾಯಾಚಿತ್ರಗಳನ್ನು, ಬಾರ್ ಚಾರ್ಟ ರಚಿಸಿ ಅನುಮೋದಿತ ಕಾರ್ಯಕ್ರಮ ಪಟ್ಟಿಯಂತೆ ನಿರ್ವಹಿಸಿದ ಪ್ರಸ್ತುತ ಹಂತ ಹಂತದವರೆಗೆ ಪೂರ್ಣಗೊಂಡಿರುವ ಪ್ರಗತಿ ವರದಿಯನ್ನು ಹಾಗೂ ಗುಣಮಟ್ಟದ ಕುರಿತು ಆಕ್ಷೇಪಿಸಲಾದ ಎಲ್ಲ ಲೋಪದೋಷ/ನ್ಯೂನತೆಗಳಿಗೆ ಕೈಗೊಂಡ ಕ್ರಮದ ಪಾಲನಾ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಲು ದಿನಾಂಕ: **16.07.2025** ರಂದು ಕಾರ್ಯನಿವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಧಾರವಾಡ ಇವರಿಗೆ ಪತ್ರವನ್ನು ಕಳುಹಿಸಲಾಗಿದೆ. ಮುಂದುವರೆದು, Construction of Rani Channamma University Phase-1 New Campus at Hirebagewadi in Belagavi ಗೆ ಕಾಮಗಾರಿಯ ಬಾಕಿ ಮೊತ್ತ ರೂ. **55,31,66,444.00/-** ಗಳನ್ನು ಸದರಿಯವರ ಕಛೇರಿಯ ಬ್ಯಾಂಕ್ ಖಾತೆಗೆ ಜಮೆ ಮಾಡಲು ಅನುಮೋದನೆ ಕೋರಲಾಯಿತು ಮತ್ತು ಡಿಸೆಂಬರ್-**2025** ರ ಒಳಗಾಗಿ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಳ್ಳುವ ಹಿನ್ನೆಲೆಯಲ್ಲಿ, ಪರಿಶೀಲಿಸಿದ ಸಭೆಯು ಬಾಕಿ ಮೊತ್ತದ ಪೈಕಿ **20** ರಿಂದ **25** ಕೋಟಿಗಳು ಮಾತ್ರ ಸಂದಾಯ ಮಾಡಲು ಸಭೆಯು ತೀರ್ಮಾನಿಸಿತು. ಆದರೆ, ಕೊನೆಯ ಹಂತದ ಬಿಲ್ಲನ್ನು ಸಂದಾಯ ಮಾಡುವ ಪೂರ್ವದಲ್ಲಿ ಎಲ್ಲ ಸಿಂಡಿಕೇಟ್ ಸದಸ್ಯರುಗಳು ಪರಿಶೀಲಿಸಿ ದೃಢೀಕರಿಸಿದ ನಂತರ ಮಾತ್ರ ಸಂದಾಯ ಸಂದಾಯ ಮಾಡಲು ಸಭೆಯು ತೀರ್ಮಾನಿಸಿತು. |
| 36 | 2025/08/X | ಸದಸ್ಯರಾದ ಶ್ರೀ ರಫೀ ಭಂಡಾರಿ ವಿಶ್ವವಿದ್ಯಾಲಯದ ವಿದ್ಯಾವಿಷಯಕ್ ಪರಿಷತ್ ಸಭೆಯ ನಡಾವಳಿಗಳನ್ನು ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೂ ಸಲ್ಲಿಸಲು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಸಭೆಯು ಅನುಮೋದನೆ ನೀಡಿತು. |
| 37 | 2025/08/XI | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡುವ ಸ್ವಾಯತ್ತ ಮತ್ತು ಸಂಯೋಜಿತ ಮಹಾವಿದ್ಯಾಲಯಗಳು ಪತ್ರವ್ಯವಹಾರಕ್ಕಾಗಿ ಉಪಯೋಗಿಸುತ್ತಿರುವ Letter Head ಮತ್ತು ಅಂಕ ಪಟ್ಟಿ ಪ್ರಮಾಣ ಪತ್ರಗಳಲ್ಲಿ ವಿಶ್ವವಿದ್ಯಾಲಯದ ಹೆಸರು ಮತ್ತು ಲಾಂಛನ ಇರುವುದಿಲ್ಲ. ಕಾರಣ, ಸದರಿ ಮಹಾವಿದ್ಯಾಲಯಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸದಸ್ಯರಾದ ಶ್ರೀ ಮಹಾಂತೇಶ ಕಂಬಾರ ತಿಳಿಸಿದರು. ಚರ್ಚಿಸಿದ ಸಭೆಯು ಅಂತಹ ಮಹಾವಿದ್ಯಾಲಯಗಳಿಗೆ **03** ಬಾರಿ ನೋಟಿಸ್ ಜಾರಿ ಮಾಡುವುದು ತದನಂತರವೂ ತಿದ್ದಿಕೊಳ್ಳದೇ ಹೊದರೇ ಪದವಿಗಳನ್ನು ಮಾನ್ಯತೆ ಮಾಡದೇ ಇರುವುದು ಹಾಗೂ ಸ್ವಾಯತ್ತ ಮಹಾವಿದ್ಯಾಲಯಗಳಿಗೆ ರೂ. 5 ಲಕ್ಷ ಮತ್ತು ಸಂಯೋಜಿತ ಮಹಾವಿದ್ಯಾಲಯಗಳಿಗೆ ರೂ. 2 ಲಕ್ಷ ದಂಡ ವಿಧಿಸಲು ಸಭೆಯು ತೀರ್ಮಾನಿಸಿತು. |

| | | |
|---|---|---|
| 38 | 2025/08/XII | E-Vidya App ನಲ್ಲಿ ನೊಂದಣಿ(1,60,000+) ಮಾಡಲಾದ ವಿದ್ಯಾರ್ಥಿಗಳ ವಿವರ ಹಾಗೂ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಷಯಗಳ ಕುರಿತಾದ ಅಪ್‌ಲೋಡ್ ಮಾಡಲಾದ ವಿಡಿಯೋಗಳನ್ನು ಸಭೆಯಲ್ಲಿ ಪ್ರಸ್ತುತಪಡಿಸಲಾಯಿತು. ಈ ಕುರಿತಂತೆ ವಿದ್ಯಾರ್ಥಿಗಳಿಗೆ ಲಾಗಿನ್ ಐಡಿ ನೀಡಲಾಗಿದ್ದು, ಐಡಿಯಲ್ಲಿ ಲಾಗಿನ್ ಮಾಡುವುದರ ಮೂಲಕ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯಬಹುದಾಗಿದೆ. ಕಲಾ ವಿಷಯಗಳಿಗೆ ಸಂಬಂಧಿಸಿದ ವಿಡಿಯೋಗಳಲ್ಲಿ ಸಮಂಜಸವಾಗಿರುವುದಿಲ್ಲವೆಂದು ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಎಲ್ಲ ವಿಷಯಗಳ ಕುರಿತಾಗಿ ಗುಣಮಟ್ಟದ ಮತ್ತು ಅರ್ಥಪೂರ್ಣವಾದ ವಿಡಿಯೋಗಳನ್ನು ಅಪ್‌ಲೋಡ್ ಮಾಡಿ ಮತ್ತೊಮ್ಮೆ ಸಭೆಗೆ ಮಂಡಿಸಲು ಸೂಚಿಸಲಾಯಿತು. |
| 40 | 2025/08/XIII | 2024–25ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ 5ನೇ ಸೆಮೆಸ್ಟರ್‌ಗೆ NEP ಅಡಿಯಲ್ಲಿ ಪ್ರವೇಶಾತಿ ನೀಡುವ ಕುರಿತು. |
| | ತೀರ್ಮಾನ | ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ **2024–25ನೇ** ಶೈಕ್ಷಣಿಕ ಸಾಲಿನ ಸ್ನಾತಕ(UG) ಕೋರ್ಸುಗಳ 3 ಮತ್ತು 4ನೇ ಸೆಮೆಸ್ಟರ್ ಪರೀಕ್ಷಾ ಅರ್ಜಿ ಭರಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಹಾಗೂ ವಿವಿಧ ಸ್ನಾತಕ ಕೋರ್ಸ್‌ಗಳ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 3 ಮತ್ತು 4ನೇ ಸೆಮೆಸ್ಟರ್‌ನಲ್ಲಿ ಅಭ್ಯಸಿಸಿ ಹಾಜರಾತಿ ಪೂರ್ಣಗೊಳಿಸದೇ ಇದ್ದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ಹಮ್ಮಿಕೊಂಡು ಹಾಜರಾತಿಯನ್ನು ಪೂರೈಸುವ ಷರತ್ತಿನೊಂದಿಗೆ 5ನೇ ಸೆಮೆಸ್ಟರ್‌ಗೆ ಪ್ರವೇಶ ಪಡೆದುಕೊಳ್ಳಲು ಮತ್ತು ಸದರಿ ವಿದ್ಯಾರ್ಥಿಗಳ ಪ್ರವೇಶ ಪಡೆದುಕೊಂಡ ನಂತರ ಪರೀಕ್ಷಾ ಅರ್ಜಿ ಭರಿಸಲು ಪ್ರತಿ ವಿಷಯಕ್ಕೆ ದಂಡ ಶುಲ್ಕ ರೂ.1500/–ಗಳನ್ನು ಭರಿಸಿಕೊಳ್ಳಲು ಹಾಗೂ 3 ಮತ್ತು 4ನೇ ಸೆಮೆಸ್ಟರ ಪರೀಕ್ಷಾ ಅರ್ಜಿ ಭರಿಸದೆ ಇರುವ ವಿದ್ಯಾರ್ಥಿಗಳು ಪ್ರವೇಶಾತಿಯನ್ನು ರದ್ದುಪಡಿಸಿಕೊಂಡು SEP ಅಡಿಯಲ್ಲಿ ಪ್ರಥಮ ಸೆಮೆಸ್ಟರ್‌ಗೆ ಪ್ರವೇಶಾತಿ ಪಡೆದುಕೊಳ್ಳಬಹುದಾಗಿದೆ. ಮುಂದುವರೆದು, ಸದರಿ ಮೇಲ್ಕಂಡಂತೆ ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಳ್ಳಲು ದಿನಾಂಕ:20.08.2025ರ ಒಳಗಾಗಿ ಪ್ರಾಚಾರ್ಯರ ಶಿಫಾರಸ್ಸು ಪತ್ರದೊಂದಿಗೆ ಖುದ್ದಾಗಿ ವಿಶ್ವವಿದ್ಯಾಲಯಕ್ಕೆ ಬಂದು ಪ್ರವೇಶಾತಿ ಪಡೆದುಕೊಳ್ಳಲು ಸಭೆಯು ಅನುಮೋದನೆ ನೀಡಿತು. |

ಕೊನೆಯದಾಗಿ, ಎಲ್ಲ ಸದಸ್ಯರುಗಳಿಗೆ ವಂದನೆಯನ್ನು ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗೂ ಅಧ್ಯಕ್ಷರು

ಇವರಿಗೆ,

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಎಲ್ಲ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ

ಪ್ರತಿ ಮಾಹಿತಿಗಾಗಿ : ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ – 04, ಭೂತರಾಮನಹಟ್ಟಿ, ಬೆಳಗಾವಿ – 591156

(ನ್ಯಾಕ್ ಮಾನ್ಯತೆ B+ ಗ್ರೇಡ್– 2021)PM-USHA (MERU)

RANI CHANNAMMA UNIVERSITY

Vidyasangama, National Highway – 04, Bhootaramanahatti, Belagavi – 591156

(NAAC Accredited with B+ Grade – 2021) PM-USHA (MERU)

E-mail: registrar@rcub.ac.in

ಕುಲಸಚಿವರ ಕಾರ್ಯಾಲಯ

Office of the Registrar

Website: www.rcub.ac.in

Phone No.: 0831-2565234

ಕ್ರ.ಸಂ.: ರಾಚವಿಬೆ/ಕುಸಕಾ/ಜಿಎಡಿ/ಸಿಂಡಿಕೇಟ್/2025-26/ 2974

ದಿನಾಂಕ: 22 AUG 2025

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ
ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ : ದಿನಾಂಕ : 12-08-2025 ರಂದು ಜರುಗಿದ ಸಿಂಡಿಕೇಟ್ ಸಭೆಯ ನಡಾವಳಿಯ ಪ್ರತಿಯನ್ನು ಕಳುಹಿಸುವ ಕುರಿತು.

ಉಲ್ಲೇಖ: ಸಿಂಡಿಕೇಟ್ ಸಭೆ ನಡೆದ ದಿನಾಂಕ : 12-08-2025

ದಿನಾಂಕ : 12-08-2025 ರಂದು ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಾಡಿರುವ ಚರ್ಚೆ ಮತ್ತು ಕೈಕೊಳ್ಳಲಾಗಿರುವ ನಿರ್ಣಯಗಳ ಪ್ರತಿಯನ್ನು ಈ ಮೂಲಕ ತಮ್ಮ ಅವಗಾಹನೆಗಾಗಿ ಮತ್ತು ಧೃಡೀಕರಣಕ್ಕಾಗಿ ಕಳಿಸುತ್ತಿದ್ದೇನೆ. ಇದರಲ್ಲಿರುವ ಯಾವುದೇ ವಿಷಯಗಳ ಬಗ್ಗೆ ತಮ್ಮ ಸಹಮತಿ ಇಲ್ಲದಿದ್ದಲ್ಲಿ ಲಿಖಿತವಾಗಿ ಅಗತ್ಯ ಟಿಪ್ಪಣಿಗಳೊಂದಿಗೆ ದಿನಾಂಕ : 23-08-2025ರ ಒಳಗೆ ವಿಶ್ವವಿದ್ಯಾಲಯಕ್ಕೆ ಇ-ಮೇಲ್ ಮುಖಾಂತರ ಸಲ್ಲಿಸಲು ಕೋರಿದೆ.

ಯಾವುದೇ ವಿಷಯದ ಅಸಹಮತಿಯ, ಲಿಖಿತ ಟಿಪ್ಪಣಿ ನಿಗಧಿತ ಸಮಯದಲ್ಲಿ ಸ್ವೀಕರಿಸದೇ ಇದ್ದಲ್ಲಿ, ಎಲ್ಲಾ ವಿಷಯಗಳಿಗೆ ತಮ್ಮ ಧೃಡೀಕರಣ ಇದೆಯೆಂದು ಭಾವಿಸಿ, ಮುಂದಿನ ಕ್ರಮ ಜರುಗಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಂತೋಷ ಕಾಮಗೌಡ ಕೆ.ಎ.ಎಸ್.
ಕುಲಸಚಿವರು